ಸಂಚಿಕೆ
೧೯
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ
೧೯
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಈ ಸಂಚಿಕೆಯಲ್ಲಿ....

ಅಭಿಮಾನಿ ತಂಡದ ನುಡಿ ೦೨
ಧರ್ಮವಾಣಿ ೦೪
ಹಬ್ಬ ೦೬
ಮೆಲುಕು ೦೭
ಪ್ರವಾಸ ಕಥನ ೦೮
ಹರಟೆ ೦೯
ಮಹಿಳಾ ವಾಣಿ ೧೧
ಕಿಶೋರ ವಾಣಿ ೧೨
ಕ್ಯಾಮರ ಕಣ್ಣಿನಿಂದ ೧೩

**ಸಂಪಾದಕ ವರ್ಗ**



ಸತ್ಯ ಪ್ರಸಾದ್



ಭಾಸ್ಕರ ತೈಲಗೇರಿ



ಅನಿಲ್ ಭಾರಧ್ವಾಜ



ಉಮಾ ಮೂರ್ತಿ



ಲಕ್ಷ್ಮಿ ಕೊಲಾಲ್



ಪ್ರಶಾಂತ ಎಂ.



ಅಮೂಲ್ಯ ಕಟ್ಟೀಮನಿ

ಮುಖಪುಟ
ಮತ್ತು
ಸಂಪಾದಕೀಯ ಪುಟ ಚಿತ್ರ:

ಮೈಸೂರು ಅರಮನೆ
ಚಿತ್ರ ಕೃಪೆ : ಅಂತರ್ಜಾಲ

### ಸಂಪಾದಕ ವರ್ಗದಿಂದ......

**ಓ**ದುಗ ಮಿತ್ರರಿಗೆ ದೀಪಾವಳಿ ಹಬ್ಬದ ಶುಭಾಶಯಗಳು !!!

ದೀಪಾವಳಿ ಹಬ್ಬದ ಸಂಭ್ರಮ ವಾತಾವರಣ ಇನ್ನೂ ನಳ ನಳಿಸುತ್ತಿದೆ. ಈ ಬಾರಿ ನಮ್ಮ ನ್ಯೂಜರ್ಸಿ ಯಲ್ಲೂ ಪಟಾಕಿ ಹಚ್ಚಿ ಆಚರಿಸಲು ಅನುಮತಿ ದೊರಕಿ, ಹೆಚ್ಚಿನ ವಾತಾವರಣ ಕಲುಷಿತವಿಲ್ಲದೆ ಮಿತವಾದ ಪಟಾಕಿಗಳ ಬಳಕೆಯಿಂದ ಹಬ್ಬವನ್ನು ಆಚರಿಸಿದ್ದು ಬಲು ವಿಶೇಷ.

ನೋಡು ನೋಡುತಿದ್ದಂತೆ ೨೦೧೮ ರ ವರ್ಷ ಮುಗಿಯುತ್ತ ಬಂತು, ೨೦೧೯ರ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಲು ತಯಾರಿ ಶುರುವಾಗಿದೆ. ನಿಮಗೆಲ್ಲ ತಿಳಿದಿರುವ ಹಾಗೆ ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿಯ ಪ್ರತಿಷ್ಠಿತ ಕನ್ನಡ ಸಂಘ. ಇಲ್ಲಿ ಪ್ರತಿ ಎರಡು ವರುಷಕ್ಕೊಮ್ಮೆ ಅಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ಚುನಾವಣೆ ನಡೆಯುತ್ತದೆ. ಚುನಾಯಿತ ಸದಸ್ಯರು ತಮ್ಮ ತಂಡಕ್ಕೆ ಹೊಸ ಹೆಸರನ್ನು ನಾಮಕರಣ ಮಾಡಿ, ಅಧ್ಯಕ್ಷರ ನಾಯಕತ್ವದಲ್ಲಿ ಮುಂದಿನ ಎರಡು ವರ್ಷ ಕನ್ನಡದ ತೇರನ್ನು ಎಳೆಯಲು ಹುಮ್ಮಸ್ಸಿನಿಂದ ಸಜ್ಜಾಗುತ್ತಾರೆ. ಮುಂದಿನ ಅಧ್ಯಕ್ಷರ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ಶ್ರೀ ಕಿರಣ್ ಅಗ್ರಹಾರ ಹಾಗು ಶ್ರೀ ಸತೀಶ್ ಹೊಸನಗರ ಸ್ಪರ್ಧಿಸುತ್ತಿದ್ದಾರೆ. ನೀವು ಬೃಂದಾವನದ ಸದಸ್ಯರಾಗಿದ್ದಲ್ಲಿ ಅಧ್ಯಕ್ಷರ ಆಯ್ಕೆಯಲ್ಲಿ ನಿಮ್ಮ ಬೆಂಬಲ ತೋರಿಸಲು ಅವಕಾಶವಿದೆ. ಸೂಕ್ತವಾಗಿ ನಿಮ್ಮ ಮತ ಚಲಾಯಿಸಿ, ನಿಮ್ಮ ಸದಸ್ಯತ್ವದ ಹಕ್ಕಿನ ಹೊಣೆಯನ್ನು ನಿಭಾಯಿಸಲು ಮರೆಯದಿರಿ. ನಿಮ್ಮ ಮತ ಪತ್ರ ಮರಳಿ ಕಳಿಸಲು ಕೊನೆಯ ದಿನಾಂಕ ನವೆಂಬರ್ ೨೬.

ಬೃಂದಾವನದ ಪ್ರಸ್ತುತ ಅಧ್ಯಕ್ಷರು 'ಶ್ರೀ ಅಶೋಕ್ ಕಟ್ಟಿಮನಿ' ಮತ್ತು ತಂಡದ ಹೆಸರು 'ಅಭಿಮಾನಿ'. ಈ ತಂಡದ ವತಿಯಿಂದ 'ಬೃಂದಾವನ ವಾಣಿ' ಮತ್ತು 'ಕನ್ನಡ ಸಾಹಿತ್ಯ' ಚಟುವಟಿಕೆಗಳನ್ನು ಕಳೆದ ಎರಡು ವರ್ಷಗಳಿಂದ ನಡೆಸುತ್ತಾ ಬಂದಿದ್ದೇವೆ, ಇದು ನಮ್ಮ ತಂಡದ ಕೊನೆಯ ಸಂಚಿಕೆ ಮತ್ತು ಕಳೆದ ಎರಡು ವರುಷಗಳಿಂದ 'ಓದುಗ ಪ್ರಭು' ಗಳಾದ ನೀವು, ನಮ್ಮ ಪ್ರತಿ ಅಂಬೆಗಾಲಿನ ಹೆಜ್ಜೆಯಲ್ಲಿ ತೋರಿದ ಪ್ರೀತಿ, ಸಹಕಾರ, ಮಾರ್ಗದರ್ಶನಕ್ಕೆ ಇಡೀ ಬೃಂದಾವನ ವಾಣಿ ತಂಡ ಚಿರಋಣಿ. ಬೃಂದಾವನ ವಾಣಿಯ ಮುಖಾಂತರ ನಮ್ಮ ನಿಮ್ಮ ಕನ್ನಡದ ಪ್ರೀತಿ, ವಿಶ್ವಾಸ, ಅನುಬಂಧ ನಿರಂತರವಾಗಿರಲಿ.

ಪಂಡಿತ್ ಜವಾಹರ್ ಲಾಲ್ ನೆಹರು ಅವರ ೧೩೦ನೇ ಜನ್ಮದಿನವಾದ ನವೆಂಬರ್ ೧೪ ರಂದು ಭಾರತದೆಲ್ಲೆಡೆ ಮಕ್ಕಳ ದಿನಾಚರಣೆಯನ್ನು ಸಂತಸ, ಸಂಭ್ರಮ ಮತ್ತು ಗೌರವದಿಂದ ಆಚರಿಸಿದರು. ಈ ದಿನ ಮಕ್ಕಳ ಹಕ್ಕು, ಪೋಷಣೆ ಮತ್ತು ಶಿಕ್ಷಣದ ಬಗ್ಗೆ ಅರಿವು ಮೂಡಿಸುವ ದಿನ. ಚಾಚಾ ನೆಹರುಯೆಂದೇ ಪ್ರಸಿದ್ಧರಾಗಿದ್ದ ಅವರು ದೇಶದ ಪ್ರಗತಿಗೆ ಮತ್ತು ಯಶಸ್ಸಿಗೆ ಮಕ್ಕಳ ಯೋಗಕ್ಷೇಮವೇ ತಳಹದಿಯೆಂದು ಪದೇ ಪದೇ ಘೋಷಿಸಿ, ಆ ನಿಟ್ಟಿನಲ್ಲಿ, ಪಂಚ ವಾರ್ಷಿಕ ಯೋಜನೆಯಲ್ಲಿ ಉಚಿತ ಪ್ರಾಥಮಿಕ ಶಿಕ್ಷಣ ಹಾಗು ಶಾಲಾಮಕ್ಕಳಿಗೆ ಉಚಿತ ಊಟ-ಬಟ್ಟೆಗಳನ್ನು ಕೊಡುವುದನ್ನು ಜಾರಿಗೊಳಿಸಿದರು. ಐ.ಐ.ಟಿ, ಐ.ಐ.ಎಂ ಮತ್ತು ಏ.ಐ.ಐ.ಎಂ.ಎಸ್ ಮುಂತಾದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳನ್ನು ಶುರುಮಾಡಿ, ಭಾರತ ದೇಶ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ತನ್ನದೇ ಆದ ಸ್ವಾವಲಂಬನೆ ಬೆಳೆಸಿಕೊಳ್ಳಲು ಬುನಾದಿ ಹಾಕಿದರು. ಭಾರತ ಈಗ ಪ್ರಪಂಚದಲ್ಲೇ ಅತಿ ಹೆಚ್ಚು ಪದವೀಧರ ಯುವಕರನ್ನು ಹೊಂದಿರುವ ದೇಶವಾಗಿರುವುದಕ್ಕೆ, ನೆಹರುರವರು ಅಂದು ನೆಟ್ಟ ಪುಟ್ಟ ಸಸಿಯೇ ಕಾರಣ. ದುಬಾರಿ 'ಇಂಟರ್ನ್ಯಾಷನಲ್ ಸ್ಕೂಲ್' ಮತ್ತು ಕಾನ್ವೆಂಟ್ ಗಳ ಸಂಸ್ಕೃತಿ ಪಾರ್ಥೇನಿಯಂ ಗಿಡದಂತೆ ಹಬ್ಬಿರುವ ಈ ಕಾಲದಲ್ಲಿ, ಬಡವ-ಶ್ರೀಮಂತರ ಬಿರುಕನ್ನು, ಕನಿಷ್ಠ ಪಕ್ಷ, ಮಕ್ಕಳ ಶಿಕ್ಷಣದಲ್ಲಾದರೂ ಕಡಿಮೆ ಮಾಡುವ ಯತ್ನ, ಅಧಿಕಾರದಲ್ಲಿರುವ ಪ್ರಬಲರು, ಪ್ರಭಾವಯುತ ಶ್ರೀಮಂತರು ಮತ್ತು ಹಿರಿಯರು ಪ್ರಯತ್ನ ಮಾಡುತ್ತಾರೆ ಎಂಬುದು ನಮ್ಮ ಆಶಯ.

ಮುಂದಿನ ಸಂಚಿಕೆಯ ಹೊತ್ತಿಗೆ ಹೊಸ 'ಬೃಂದಾವನ ವಾಣಿ' ತಂಡ ರೂಪುಗೊಂಡು ನಿಮ್ಮನ್ನು ಅಕ್ಷರ ಪ್ರಪಂಚದಲ್ಲಿ ಭೇಟಿಯಾಗಲಿದ್ದಾರೆ.

ಈ ನಡುವೆ ಕೇಂದ್ರ ಸಚಿವ, ಹಿರಿಯ ರಾಜಕಾರಣಿ ಶ್ರೀ ಅನಂತಕುಮಾರ್ ಇನ್ನಿಲ್ಲ, ಅವರಿಗೆ ನಮ್ಮ ಹೃದಯಪೂರ್ವಕ ಅಂತಿಮ ನಮನಗಳು.

ಡಿಸೆಂಬರ್ ೧, ಮಕ್ಕಳೋತ್ಸವ ಕಾರ್ಯಕ್ರಮದಲ್ಲಿ ನಮ್ಮನ್ನು ಭೇಟಿಯಾಗಲು ಮರೆಯದಿರಿ!!

**ನಮಸ್ಕಾರಗಳು**

***ಅಮೂಲ್ಯ, ಅನಿಲ್, ಉಮಾ, ಪ್ರಶಾಂತ್, ಭಾಸ್ಕರ್, ಲಕ್ಷ್ಮಿ, ಸತ್ಯ.***




Copyright © KCO – Brindavana


ಸಂಚಿಕೆ
೧೯
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅಭಿಮಾನಿ ತಂಡದ ನುಡಿ

*ಅಭಿಮಾನಿ ತಂಡದ ಯಶಸ್ಸಿನ ಹಿಂದಿರುವ ಅಭಿಮಾನಿ ದೇವರುಗಳಿಗೆಲ್ಲ ಪ್ರೀತಿ ಪೂರ್ವಕ ನಮನ...*



ಡಾ|| ಅಶೋಕ್ ಕಟ್ಟೀಮನಿ

ಎರಡು ವರ್ಷಗಳ ಬೃಂದಾವನ ಕನ್ನಡ ಕೂಟದ ಪದಾಧಿಕಾರಿಗಳ ಅವಧಿ ಎಷ್ಟು ಬೇಗ ಮುಗಿದಂತೆ ಅನಿಸುತ್ತಿದೆ. ಈ ಅವಧಿಯಲ್ಲಿ ನನ್ನ ಮತ್ತು ಅಭಿಮಾನಿ ತಂಡದ ಹಿಂದೆ ನಿಂತು ಹರಿಸಿ, ಉತ್ತೇಜಿಸಿ, ಎಲ್ಲ ಯಶಸ್ಸಿಗೆ ಕಾರಣರಾದ ನ್ಯೂ ಜರ್ಸಿಯ ಕನ್ನಡಿಗರಿಗೆಲ್ಲ ನಮ್ಮ ಮನಃ ಪೂರ್ವಕ ವಂದನೆಗಳು.

ಅಭಿಮಾನಿ ತಂಡದೊಂದಿಗೆ ಬೃಂದಾವನದ ಜವಾಬ್ದಾರಿ ವಹಿಸಿಕೊಂಡಾಗ ನಾವು ಹಲವಾರು ಕನಸುಗಳನ್ನು ಕಂಡೆವು, ಗುರಿಗಳನ್ನ ಗುರುತಿಸಿ ಕೊಂಡೆವು. ಈ ಎರಡು ವರ್ಷದ ಅವಧಿಯಲ್ಲಿ ಆ ಎಲ್ಲ ನಿಗದಿತ ಗುರಿಗಳನ್ನು ತಲುಪಿದೆವು ಎಂದು ಹೇಳಲು ಹೆಮ್ಮೆ ಮತ್ತು ಸಂತೋಷವಾಗುತ್ತಿದೆ. ಈ ಸಾಧನೆಗಳ ಹಿಂದೆ, ಅಭಿಮಾನಿ ತಂಡದ ಸ್ನೇಹಿತರಿದ್ದಾರೆ, ಬೃಂದಾವನ ವಿಶ್ವಸ್ಥ ಮಂಡಳಿಯ ಸದಸ್ಯರಿದ್ದಾರೆ, ಹಿಂದಿನ ಅವಧಿಯ ನಿರ್ದೇಶಕರು, ಅಧ್ಯಕ್ಷರಿದ್ದಾರೆ, ಯುವ ಬೃಂದಾವನದ ಸದಸ್ಯರಿದ್ದಾರೆ. ನ್ಯೂ ಜರ್ಸಿ ಸಂಗೀತ ನೃತ್ಯ ಕಲಾವಿದರಿದ್ದಾರೆ, ವಿವಿಧ ಕೂಟಗಳಾದ ನಾಸಾ, ವಿ.ಎಸ.ಎನ್.ಜೆ, ವಿ.ಪಿ.ಎ, ಮಂಗಳೂರು ಕ್ರಿಶ್ಚಿಯನ್ ಅಸೋಸಿಯೇಷನ್, ಕಟ್ಟೀ ಬಾಯ್ಸ್ ಇದ್ದಾರೆ. ಇವುಗಳೊಂದಿಗೆ ಅಭಿಮಾನಿಗಳಾದ ನಿಮ್ಮ ಉತ್ತೇಜನ, ಒಂದೆರಡು ಒಳ್ಳೆಯ ಮಾತುಗಳು, ನಮಗೆಲ್ಲ ಸಿಂಹ ಬಲ ನೀಡಿ ಉತ್ತಮ ಕೆಲಸ ಮಾಡಿಸಿದ್ದು ಅಚ್ಚರಿ ಏನಲ್ಲ.

ನಮ್ಮ ಅವಧಿಯಲ್ಲಿ, ನಾವು ಒತ್ತು ಕೊಟ್ಟಿದ್ದು, ಬೃಂದಾವನದ ಕಾರ್ಯಕ್ರಮಗಳು ಬಹುಕಾಲ ನೆನಪಿನಲ್ಲಿ ಉಳಿಯುವ ಒಂದು ಸುಂದರ ಅನುಭವವಾಗಬೇಕೆಂದು. ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳು, ರುಚಿಕಟ್ಟಾದ ಊಟ, ಆಸಕ್ತರಿಗೆಲ್ಲ ಭಾಗವಹಿಸಲು ಅವಕಾಶ...ಇಷ್ಟಾದರೆ ಇನ್ನೇನು ಬೇಕು? ಆಹ್ವಾನಿತ ಕಲಾವಿದರೊಂದಿಗೆ ಸ್ಥಳೀಯ ಕಲಾವಿದರೆಲ್ಲ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸುವ ನಮ್ಮ ಪ್ರಯತ್ನ ನಿಮ್ಮೆಲ್ಲರ ಮನ ಗೆದ್ದಿತು.

ನಮ್ಮ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸ್ಥಳೀಯ ಕಲಾವಿದರ ಸಂಖ್ಯೆ ೧೮೦ ಕ್ಕೂ ಹೆಚ್ಚು !! ನಾಟಕಗಳ ಸಂಕಲನ "ಆಟ ರಂಗಾಟ", ಸಂಗೀತ ಬೃಂದಾವನ, ನಾಟ್ಯ ಬೃಂದಾವನ, ಮಕ್ಕಳಿಂದ ಗಣೇಶ ರಚನೆ. ನ್ಯೂ ಜರ್ಸಿ ಕನ್ನಡಿಗರಲ್ಲಿ ಪ್ರತಿಭೆಗಳ ಮಹಾಪೂರವೇ ಹರಿಯುತ್ತಿದೆ. ..

ಯುವ ಬೃಂದಾವನದ ಹಲವಾರು ಕಾರ್ಯಕ್ತಮಗಳ ಜೊತೆ, ನಾವು ಡಾ||ಎಂ.ಜಿ.ಪ್ರಸಾದ್ ರವರ ಮಾರ್ಗದರ್ಶನದಲ್ಲಿ ಪ್ರಾರಂಭಿಸಿದ "ಡಿಸ್ಕವರ್- ಜಗತ್ತಿಗೆ ಪ್ರಾಚೀನ ಭಾರತೀಯ ಜ್ಞಾನದ ಕೊಡುಗೆ" (Contribution of Ancient India to World Knowledge) ಕಾರ್ಯಕ್ರಮ ಮುಂದೊಂದು ದಿನ ಬೃಹದಾಕಾರವಾಗಿ ಬೆಳೆದರೆ, ಅದಕ್ಕಿಂತ ಹೆಮ್ಮೆಯ ವಿಷಯ ಇನ್ನೇನಿದೆ?. ಸನಾತನ ಭಾರತದ ಜ್ಞಾನ, ಹಿರಿಮೆ, ಜಗತ್ತಿಗೆ ನೀಡಿದ ಕೊಡುಗೆ, ನಮ್ಮ ಮುಂದಿನ ಜನಾಂಗಕ್ಕೆ ತಿಳಿಯುವಂತಾದರೆ ಅದಕ್ಕಿಂತ ದೊಡ್ಡ ಸಾಧನೆ ಇನ್ನೇನು?

ಬೃಂದಾವನ ಕನ್ನಡ ಶಾಲೆಗಳ ಬಗ್ಗೆ ಒಂದೆರಡು ಮಾತು ಹೇಳಲೇ ಬೇಕು. ನಮ್ಮ ಮೂರು ಶಾಲೆಗಳಿಂದ ೧೦೦ ಕ್ಕೂ ಹೆಚ್ಚು ಮಕ್ಕಳು ಅಕ್ಕರೆಯಿಂದ ಕನ್ನಡ ಕಲಿಯುತ್ತಿದ್ದಾರೆ. ಕ್ಯಾಲಿಫೋರ್ನಿಯಾದ ಶ್ರೀ ಶಿವ ಮತ್ತು ತಂಡದವರೊಂದಿಗೆ ಕೈ ಜೋಡಿಸಿ, ಕರ್ನಾಟಕ ಸರಕಾರದ ಸಹಯೋಗದಿಂದ ಎಂಟು ಹಂತಗಳ ಪುಸ್ತಕಗಳನ್ನು ಮುದ್ರಿಸಿದ್ದರಿಂದ ಅತ್ಯಂತ ಕಡಿಮೆ ದರದಲ್ಲಿ ನಮ್ಮ ಮಕ್ಕಳಿಗೆಲ್ಲ ಕನ್ನಡ ಶಾಲೆಯ ಪುಸ್ತಕಗಳು ದೊರೆಯುತ್ತಿವೆ. ವರ್ಷ ಪೂರ್ತಿ ನಮ್ಮ ಎಲ್ಲ ಕಾರ್ಯಕ್ರಮಗಳಲ್ಲಿ ಮಕ್ಕಳ ಕಾರ್ಯಕ್ರಮಗಳನ್ನು ಕೂಡ ಒಂದುಗೂಡಿಸಿ ಅತ್ಯಂತ ಹೆಚ್ಚಿನ ಗುಣಮಟ್ಟದ ಕಾರ್ಯಕ್ರಮಗಳನ್ನು ನೆಡೆಸಿ ಕೊಟ್ಟಿದ್ದೇವೆ. ಅದರ ಹಿಂದಿರುವ ಪೋಷಕರು, ಶಿಕ್ಷಕರು ಮತ್ತು ಕಾರ್ಯಕರ್ತರಿಗೆಲ್ಲ ತುಂಬು ಹೃದಯದ ಕೃತಜ್ಞತೆಗಳು.

ಈ ದಿಸೆಯಲ್ಲಿ ಮತ್ತೊಂದು ಪ್ರಮುಖ ಸಾಧನೆಯೆಂದರೆ ಕಾರ್ಯಕ್ರಮಗಳಿಗೆ ಬರುತ್ತಿರುವ ಕನ್ನಡಿಗರ ಸಂಖ್ಯೆ ೬೦೦ ಕ್ಕೂ ಹೆಚ್ಚಾಗಿ ೮೦೦ ಕೂಡ ತಲುಪಿರುವುದು. ಕಳೆದ ಎರಡು ವರ್ಷಗಲ್ಲಿ ನಮ್ಮ ಸದಸ್ಯರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಫೇಸ್ ಬುಕ್ ನಲ್ಲಿರುವ ಸ್ನೇಹಿತರ ಸಂಖ್ಯೆ ಎರಡು ಸಾವಿರಕ್ಕೂ ದಾಟಿದೆ. ಇದಕ್ಕಿಂತ ದೊಡ್ಡ ಪ್ರಶಸ್ತಿ ಮತ್ತೊಂದಿಲ್ಲ.

ಎಂದಿನಂತೆ ಸೇವಾ ಬೃಂದಾವನ, ತನ್ನ ಹೊಸ ಕಾರ್ಯಕ್ರಮಗಳಿಂದ ಹೆಚ್ಚು ಹೆಚ್ಚು ಫಲಾನುಭವಿಗಳನ್ನು ತಲುಪಿದೆ. ನಾವು ಅಕ್ಕದೊಂದಿಗೆ ನಡೆಸಿದ ೫ ಕೆ ಓಟ ಬಹುಕಾಲ ನೆನೆಪಿನಲ್ಲಿ ಉಳಿಯುವಂತಹದ್ದು. ನಮ್ಮ ಎಲ್ಲ ಕಾರ್ಯಕ್ರಮಗಳಿಂದ ಉಳಿತಾಯವಾದ ಹಣ ಕಳೆದ ಹದಿನಾಲ್ಕು ವರ್ಷಗಳಲ್ಲಿ ಬೃಂದಾವನದಲ್ಲಿ ಸೇರಿಸಿದ ಮೊತ್ತಕ್ಕೆ ಸಮನಾಗಿರುವುದು ದೊಡ್ಡ ಸಾಧನೆ. ನಮ್ಮ ಈ ಸಾಧನೆಗೆ ಪ್ರೋತ್ಸಾಹಿಸಿ ದೇಣಿಗೆ ನೀಡಿದ ಪ್ರಾಯೋಜಕರಿಗೆ ಮತ್ತು ಸ್ನೇಹಿತರಿಗೆ ಬೃಂದಾವನ ಅತ್ಯಂತ ಅಭಾರಿ.

ರುಚಿಯಾದ ಊಟ ಎಲ್ಲ ಕಾರ್ಯಕ್ರಮಗಳ ಜೀವನಾಡಿ. ನಮ್ಮ ಎಲ್ಲ ಕಾರ್ಯಕ್ರಮಗಳಲ್ಲಿ ಅತ್ಯುತ್ತಮ ಊಟ ನೀಡಬೇಕೆಂದ ನಮ್ಮ ಮೊದಲ ಗುರಿಯನ್ನು ಯಶಸ್ವಿಯಾಗಿ ಪೂರೈಸಿದ್ದೇವೆ. ನೀವೆಲ್ಲ ರುಚಿಯಾದ ಊಟಕ್ಕಾಗಿ ಬೆನ್ನು ತಟ್ಟಿದ್ದೀರಿ. ಭೋಜನದಲ್ಲಿ ಸಹಕರಿಸಿದ ಎಲ್ಲ ಕಾರ್ಯಕರ್ತರಿಗೊಂದು ದೊಡ್ಡ ನಮನ.

ಸಾಹಿತ್ಯ ಬೃಂದಾವನದ ಈ ಎರಡು ವರ್ಷಗಳ ಕೊಡುಗೆ ಅತ್ಯಂತ ಗಮನಾರ್ಹ. ಸಾಹಿತ್ಯ ಬೃಂದಾವನದ ಎರಡು ಕಾರ್ಯಕ್ರಮಗಳು, 'ಹಾಸ್ಯ ಸಾಹಿತ್ಯ' ಮತ್ತು 'ಕನ್ನಡ ಸಾಹಿತ್ಯದಲ್ಲಿ ನಾಟಕಗಳ ಪಾತ್ರ' ಅತ್ಯಂತ ಯಶಸ್ವಿಯಾಗಿ ನೆರವೇರಿದವು. ನಮ್ಮ ದ್ವೈಮಾಸಿಕ ಪತ್ರಿಕೆ "ಬೃಂದಾವನ ವಾಣಿ" ಮನೆ ಮಾತಾಗಿದೆ. ಈ ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸಿದ ಸ್ನೇಹಿತರಿಗೆ ಮತ್ತು ಬೃಂದಾವನ ವಾಣಿಯ ಸಂಪಾದಕ ಮಂಡಳಿಗೆ ನಮ್ಮೆಲ್ಲರ ಕೃತಜ್ಞತೆಗಳು. ಇದರೊಂದಿಗೆ ಪ್ರಪ್ರಥಮವಾಗಿ ಸಾಹಿತ್ಯ ಬೃಂದಾವನದಿಂದ ಹಿರಿಯ ಕನ್ನಡ ಕವಿ ಶ್ರೀ ನಿಸ್ಸಾರ್ ಅಹ್ಮದ್ ರವರ ಮುನ್ನುಡಿಯೊಂದಿಗೆ "ಬದುಕು ಜಟಕಾ ಬಂಡಿ" ಎಂಬ ಬದುಕಿನ ಅನುಭವಗಳ ಸಂಕಲನವನ್ನು ಪುಸ್ತಕ ರೂಪವಾಗಿ ಪ್ರಕಟಿಸಿದೆವು. ಇದು ಕನ್ನಡ ಸಂಘಕ್ಕೊಂದು ವಿಶೇಷ ಸಾಧನೆಯೇ ಸರಿ. ನ್ಯೂ ಜರ್ಸಿಯಲ್ಲಿ ಅನೇಕ ಕನ್ನಡ ಲೇಖಕರು ಬೆಳೆದು ಬರುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆ.

ನಮ್ಮ ಮತ್ತೊಂದು ದೊಡ್ಡ ಸಾಧನೆಯೆಂದರೆ ಆನ್ ಲೈನ್ ರಿಜಿಸ್ಟ್ರೇಷನ್. ಸದಸ್ಯರೆಲ್ಲ ಕಾರ್ಯಕ್ರಮಗಳಿಗೆ ಕೆಲವೇ ಕ್ಷಣಗಳಲ್ಲಿ ನೋಂದಾಯಿಸಿ ಕೊಳ್ಳಬಹುದು. ಸುಂದರ ವೆಬ್ ಸೈಟ್ ಮತ್ತು ಸುಂದರ ಫ್ಲೈಯರ್ ಗಳನ್ನು ನೀವು ಸಾಕಷ್ಟು ಪ್ರಶಂಸಿದ್ದಿರಿ.

ಇನ್ನು ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಹೆಸರಾಂತ ಕಲಾವಿದರು, ಸಾಹಿತಿಗಳು, ಸಾಕಷ್ಟು ಸಾಧನೆ ಮಾಡಿದವರು.. ಕನ್ನಡ ಚಲನ ಚಿತ್ರ ನಟ ಶ್ರೀ ಜಗ್ಗೇಶ್, ಗಾಯಕಿ ಶ್ರೀಮತಿ ಬಿ ಆರ್ ಛಾಯಾ, ಹಾಸ್ಯಗಾರ್ತಿ ಶ್ರೀಮತಿ ಸುಧಾ ಬರಗೂರ್, ಭರತನಾಟ್ಯ ಕಲಾವಿದರಾದ ಡಾ ಸಂಜಯ್ ಶಾಂತಾರಾಮ್, ತರಂಗ ತಂಡದ ಕಲಾವಿದರು, ಚಿತ್ರ ನಟಿ ಶ್ರೀಮತಿ ಹರಿಣಿ, ಸಾಹಿತಿ ಡಾ ಕಣ್ಣನ್, ನಾಟಕಕಾರ ಶ್ರೀ ಗೋವಿಂದನ್, ವಾದ್ಯಗೋಷ್ಠಿ ಕಲಾವಿದರಾದ ಡಾ. ಸುಚೇತನ್, ಐಶ್ವರ್ಯ, ವೆಂಕಿ, ರಾಜೀವ್, ಭರತ್, ಧನುಷ್, ದೀಕ್ಷಾ, ಪೃಥ್ವಿ, ತಮ್ಮ ಪ್ರತಿಭೆಯಿಂದ ನಮ್ಮ ಮನ ಸೂರೆಗೊಂಡರು. ಈ ಎಲ್ಲ ಸಾಧಕರು ನಮ್ಮ ಜೊತೆಯಿದ್ದಿದ್ದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ. ಇವರೊಂದಿಗೆ ನಮ್ಮ ನ್ಯೂ ಜರ್ಸಿಯ ಕನ್ನಡದ ಕಲಾವಿದರು ಸರಿಸಾಟಿಯಾಗಿ ಕಾರ್ಯಕ್ರಮಗಳಿಗೆ ಮೆರಗು ಕೊಟ್ಟಿದ್ದಾರೆ.

(ಮುಂದಿನ ಪುಟಕ್ಕೆ...)


Copyright © KCO – Brindavana

## ಅಭಿಮಾನಿ ತಂಡದ ನುಡಿ

(...ಹಿಂದಿನ ಪುಟದಿಂದ)

ನೋಡುತ್ತಿರುವಂತೆ ಡಿಸೆಂಬರ್ ೧ ರ ಮಕ್ಕಳೋತ್ಸವ ಮತ್ತು ವಾರ್ಷಿಕೋತ್ಸವ ಬಂದೇ ಬಿಟ್ಟಿತು. ಇದು ಅಭಿಮಾನಿ ತಂಡದ ಕೊನೆಯ ಕಾರ್ಯಕ್ರಮ. ಪ್ರತಿ ವರ್ಷದಂತೆ ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿದ್ದೇವೆ. ನಮ್ಮ ಕನ್ನಡ ಶಾಲೆಯ ಮಕ್ಕಳು ವಿಶೇಷ ಹಾಡು, ನೃತ್ಯ ನಾಟಕಗಳಿಂದ ನಿಮ್ಮನ್ನು ರಂಜಿಸಲಿದ್ದಾರೆ. ನ್ಯೂ ಜೆರ್ಸಿ ಕನ್ನಡ ಮಕ್ಕಳ ವಾದ್ಯಗೋಷ್ಠಿ ಮತ್ತು ಇತರ ಮನೋರಂಜನಾ ಕಾರ್ಯಕ್ರಮಗಳನ್ನು ನೀವು ಖಂಡಿತ ನೋಡಲೇ ಬೇಕು.

ಇದರೊಂದಿಗೆ ಇನ್ನೆರಡು ವಿಶೇಷ ಕಾರ್ಯಕ್ರಮಗಳನ್ನು ನಿಮಗಾಗಿ ರೂಪಿಸಿದ್ದೇವೆ. ಡಾ ಸಂಜಯ್ ಶಾಂತಾರಾಮ್ ಮತ್ತು ನ್ಯೂ ಜೆರ್ಸಿ ಕಲಾವಿದರೆಲ್ಲ ಸೇರಿ "ಕರ್ನಾಟಕ ವೈಭವ" ನೃತ್ಯ ರೂಪಕವನ್ನು ಪ್ರದರ್ಶಿಸುತ್ತಿದ್ದಾರೆ. ಈ ನೃತ್ಯ ರೂಪಕ ನಿಮಗೆ ಬ್ರಾಡ್ ವೇ  ಶೋ ನೆನಪಿಗೆ ತಂದರೆ ಅಚ್ಚರಿಯಿಲ್ಲ. ಇದರೊಂದಿಗೆ ಖ್ಯಾತ ನಾಟಕಕಾರ ಶ್ರೀ ರಾಜೇಂದ್ರ ಕಾರಂತ್ ರವರ "ಮೈಸೂರು ಮಲ್ಲಿಗೆ" ಸಂಗೀತ ನಾಟಕವನ್ನ ನ್ಯೂ ಜೆರ್ಸಿ ಕಲಾವಿದರು, ಸ್ನೇಹಿತರೆಲ್ಲ ಸೇರಿ ಪ್ರದರ್ಶಿಸುತ್ತಿದ್ದೇವೆ. ಕನ್ನಡದ ಹೆಸರಾಂತ ಪ್ರೇಮ ಕವಿ ಶ್ರೀ ನರಸಿಂಹ ಸ್ವಾಮಿಯವರ ಹಾಡುಗಳ ಹಬ್ಬ ನಿಮಗಾಗಿ ಕಾದಿದೆ. ಈ ಸಂಗೀತ ನಾಟಕ, ಎಲ್ಲರನ್ನು ಸುಂದರ ಪ್ರೇಮದ ಕಡಲಲ್ಲಿ ಮೀಯಿಸಲಿದೆ.

ಇದೆ ಸಂದರ್ಭದಲ್ಲಿ ಬೃಂದಾವನದ ಹೊಸ ಕಾರ್ಯಕಾರಿ ಸಮಿತಿಯ ಸ್ಥಾನಗಳಿಗಾಗಿ ಚುನಾವಣೆಗಳು ನಡೆಯುತ್ತಿವೆ. ಬರುವ ಹೊಸ ಕಾರ್ಯಕಾರಿ ಸಮಿತಿ ಬೃಂದಾವನದ ಸಾಧನೆಗಳನ್ನು ಮತ್ತಷ್ಟು ಎತ್ತರಕ್ಕೆ ಒಯ್ಯುವುದರಲ್ಲಿ ಸಂದೇಹವಿಲ್ಲ. ಹೊಸ ಕಾರ್ಯಕಾರಿ ಸಮಿತಿಗೆ ಅಭಿಮಾನಿ ತಂಡದ ಶುಭಾಶಯಗಳು. ನಿಮ್ಮ ಹಿಂದೆ ನಾವಿದ್ದೇವೆ.

ಮತ್ತೊಮ್ಮೆ ಕಳೆದ ಎರಡು ವರ್ಷ ಬೃಂದಾವನ ಕಾರ್ಯಕಾರಿ ಸಮಿತಿಯ ಜವಾಬ್ದಾರಿ ಒಪ್ಪಿಸಿದ ನಿಮಗೆಲ್ಲ ಅಭಿಮಾನಿ ತಂಡದ ತುಂಬು ಹೃದಯದ ಧನ್ಯವಾದಗಳು. ದಯವಿಟ್ಟು ನಮ್ಮ ಕೊನೆಯ ಕಾರ್ಯಕ್ರಮ, ಡಿಸೆಂಬರ್ ೧ ರಂದು ತಪ್ಪದೆ ಭಾಗವಹಿಸಿ.....  ಮುಂದೆ ಮತ್ತಷ್ಟು ಕನ್ನಡದ ಕೆಲಸ ಜೊತೆಯಾಗಿ ಮಾಡೋಣ.

ನಿಮ್ಮೆಲ್ಲರ ಅಭಿಮಾನಿ,

*ಡಾ. ಅಶೋಕ್ ಕಟ್ಟೀಮನಿ*

ಅಭಿಮಾನಿ ತಂಡದ ಪರವಾಗಿ



**ಬಾರಿಸು ಕನ್ನಡ ಡಿಂಡಿಮವ**

KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮ ಬೃಂದಾವನ


Copyright © KCO – Brindavana

## ಅರ್ಜುನನ ಪ್ರಶ್ನೆಗಳು - ಶ್ರೀ ಕೃಷ್ಣ ಪರಮಾತ್ಮನ ಉತ್ತರಗಳು



ಡಾ|| ಎಂ.ಜಿ.ಪ್ರಸಾದ್

**ಸಾ**ಮಾನ್ಯವಾಗಿ ಪ್ರಶ್ನೆಗಳು ಏಳುವುದು ಮನುಷ್ಯನಿಗೆ ಸಹಜ. ಆದ್ದರಿಂದ ಯಾವ ಮನುಷ್ಯನೇ ಆಗಲಿ ತನ್ನ ಜ್ಞಾನದ ವೃದ್ಧಿಗೆ ಜ್ಞಾನಿಗಳ ಬಳಿ ತನ್ನ ಪ್ರಶ್ನೆಗಳನ್ನಿಟ್ಟು ಅವರು ನೀಡಿದ ಉತ್ತರಗಳನ್ನು ಅರಿತು ಸತತವಾಗಿ ಜ್ಞಾನದ ವೃದ್ಧಿಯನ್ನು ಮಾಡಿಕೊಳ್ಳುತ್ತಾ ಸಿದ್ಧಿಯನ್ನು ಪಡೆಯಬೇಕು. ಸಾಧನಾ ಮಾರ್ಗದಲ್ಲಿ ಜ್ಞಾನದ ವೃದ್ಧಿಯಾಗುತ್ತಾ ಪ್ರಶ್ನೆಗಳ ಆಳವೂ ಹೆಚ್ಚುತ್ತದೆ. ಇಲ್ಲಿ ಪ್ರಸ್ತುತವಾದದ್ದು ಅರ್ಜುನನ ಪ್ರಶ್ನೆಗಳು. ಅರ್ಜುನನು ಸಾಮಾನ್ಯನಲ್ಲ. ಆತನು ಮೇಧಾವಿ, ಧರ್ಮದ ಮೂರ್ತಿಯಾದ ಧರ್ಮರಾಯನ ತಮ್ಮ. ಅರ್ಜುನನು ಮಹಾ ಶೂರ. ಇಂತಹ ಅರ್ಜುನನಿಗೆ ಅಂದರೆ ಧರ್ಮವನ್ನು ಸದಾ ಪರಿಪಾಲಿಸುತ್ತಿದ್ದ ಪಾಂಡವರಿಗೆ ಬೇರೆ ದಾರಿಯಿಲ್ಲದೆ ಕೌರವರೊಡನೆ ಯುದ್ಧ ಮಾಡಲೇಬೇಕೆಂಬ ಪರಿಸ್ಥಿತಿ ಬಂದಿತು. ಕೌರವ ರಾಜ ದುರ್ಯೋಧನನು ಪಾಂಡವರಿಗೆ ಯುದ್ಧವಿಲ್ಲದೆ ಒಂದು ಸೂಜಿಯ ಮೊನೆಯಷ್ಟೂ ಭೂಮಿಯನ್ನು ಕೊಡುವುದಿಲ್ಲ ಎಂದು ಪಾಂಡವರ ಪರವಾಗಿ ಸಂಧಿ ಮಾಡಲು ಬಂದ ಶ್ರೀ ಕೃಷ್ಣನನ್ನೇ ಧಿಕ್ಕಾರ ಮಾಡಿ ತಿರಸ್ಕಾರ ಮಾಡಿದ. ನಂತರ ಪಾಂಡವರು ಯುದ್ಧ ಮಾಡಲೇಬೇಕಾಯಿತು. ಇಂತಹ ಪರಿಸ್ಥಿತಿಯಲ್ಲಿ ಯುದ್ಧಭೂಮಿಯಲ್ಲಿ ಇನ್ನೇನು ಯುದ್ಧ ಆರಂಭವಾಗಲೇಬೇಕು ಎನ್ನುವ ಸಮಯದಲ್ಲಿ ತನ್ನೆದುರು ಶತ್ರುಪಕ್ಷದಲ್ಲಿ ನಿಂತಿದ್ದ ಗುರುಗಳು, ದಾಯಾದಿಗಳು ಹಾಗೂ ತನ್ನವರನ್ನೇ ಆದವರನ್ನು ನೋಡಿದಾಗ ಅರ್ಜುನನಿಗೆ ಮನೋಬಲ ಕುಗ್ಗಿ ಮನಸ್ಸಿಗೆ ವಿಷಾದ ಉಂಟಾಗಿ ತನ್ನ ರಥದ ಸಾರಥಿ ಹಾಗೂ ಗುರುವಾದ ಶ್ರೀ ಕೃಷ್ಣ ಪರಮಾತ್ಮನನನ್ನು ಗಹನವಾದ ಪ್ರಶ್ನೆಗಳನ್ನು ಕೇಳಿದನು. ಅಂತಹ ಗಹನ ಪ್ರಶ್ನೆಗಳನ್ನು ಆಧಾರವಾಗಿಟ್ಟುಕೊಂಡು ಉತ್ತರ ರೂಪದಲ್ಲಿ ತತ್ವಗಳನ್ನು ಹಾಗೂ ಅದರ ಜೊತೆಗೆ ವಿವರಣೆಗಳನ್ನು ಶ್ರೀ ಕೃಷ್ಣ ಪರಮಾತ್ಮನು ನೀಡಿದನು.

ಆ ಪ್ರಶ್ನೆ ಉತ್ತರಗಳನ್ನು ಸರಳ ರೂಪದಲ್ಲಿ ನೋಡೋಣ.



ಚಿತ್ರ : ಅಂತರ್ಜಾಲ

**ಪ್ರಶ್ನೆ:** ಹೇ ಕೃಷ್ಣನೇ, ಯುದ್ಧ ಮಾಡಲು ಕಾತುರರಾಗಿ ನಿಂತಿರುವ ಈ ನೆಂಟರನ್ನು ನೋಡಿ ನನ್ನ ಕೈಕಾಲುಗಳು ನಡುಗುತ್ತಿವೆ, ಮತ್ತು ನನ್ನ ಬಾಯಿ ಒಣಗುತ್ತಿದೆ, ನನ್ನ ಶರೀರ ಕಂಪಿಸುತ್ತಿದೆ, ಮತ್ತು ನನ್ನ ರೋಮಗಳು ನೆಟ್ಟಗೆ ನಿಂತಿವೆ. (೧-೨೮). ಆದ್ದರಿಂದ ಮಾಧವನೇ, ನಮ್ಮ ನೆಂಟರಾದ ಧೃತರಾಷ್ಟ್ರನ ಮಕ್ಕಳನ್ನು ನಾವು ಕೊಲ್ಲಬಾರದು. ಸ್ವಜನರನ್ನು ಕೊಂದು ನಾವು ಹೇಗೆ ಸುಖಿದಿಂದಿದ್ದೇವು? (೧-೩೭)

***ಉತ್ತರ:*** *ಅರ್ಜುನನೇ, ಆರ್ಯನಿಗೆ ತಕ್ಕುದಲ್ಲದ, ಸ್ವರ್ಗದ ಹಾದಿಯನ್ನು ತಪ್ಪಿಸುವ, ಕೆಟ್ಟ ಹೆಸರನ್ನೂ ತರುವ ಈ ಅಪಾಯಕರ ಖಿನ್ನತೆಯು ನಿನಗೆ ಎಲ್ಲಿಂದ ಬಂದಿತು?*

**ಪ್ರಶ್ನೆ:** (ಓ ಕೃಷ್ಣನೇ) ನನ್ನ ಹೃದಯವು ಕರುಣಾ ಭಾವದಿಂದ ತುಂಬಿದ್ದು ನನ್ನ ಮನಸ್ಸು ಕರ್ತವ್ಯದ ವಿಷಯದಲ್ಲಿ ಗೊಂದಲಕ್ಕೀಡಾಗಿದೆ. ನಾನು ನಿನ್ನನ್ನು ಕೇಳುತ್ತಿದ್ದೇನೆ. ಯಾವುದು ನನಗೆ ಒಳ್ಳೆಯದೋ ಅದನ್ನು ನಿಶ್ಚಯಿಸಿ ಹೇಳು. ನಾನು ನಿನ್ನ ಶಿಷ್ಯ. ನಿನ್ನಲ್ಲಿ ಶರಣು ಹೊಂದಿದ ನನಗೆ ಬೋಧಿಸು. (೨-೭)

***ಉತ್ತರ:*** *(ಎಲೈ ಅರ್ಜುನ) ಶೋಕಿಸುವುದಕ್ಕೆ ತಕ್ಕವರಲ್ಲದವರಿಗಾಗಿ ನೀನು ಶೋಕಿಸುತ್ತಿರುವೆ ಮತ್ತು ತಿಳಿದವರಂತೆ ಮಾತುಗಳನ್ನೂ ಸಹ ಆಡುತ್ತಿರುವೆ. ಪಂಡಿತರು ಸತ್ತವರಿಗಾಗಲೀ, ಬದುಕಿರುವರಿಗಾಗಲೀ ಅಳುವುದಿಲ್ಲ. (೨-೧೧)*

**ಪ್ರಶ್ನೆ:** ಹೇ ಕೇಶವ, ಸ್ಥಿರವಾದ ಪ್ರಜ್ಞೆಯುಳ್ಳ ಮತ್ತು ಆತ್ಮನಲ್ಲಿ ನೆಲೆಸಿನಿಂತ ಬುದ್ಧಿಯುಳ್ಳ, ಯೋಗಿಯು ಹೇಗೆ ಮಾತಾಡುತ್ತಾನೆ? ಅಂತಹ ಸ್ಥಿತ ಪ್ರಜ್ಞನು ಹೇಗೆ ನಡೆದುಕೊಳ್ಳುತ್ತಾನೆ? (೨-೫೪)

***ಉತ್ತರ:*** *ಎಲೈ ಪಾರ್ಥನೇ, ಮನಸ್ಸಿರುವ ಎಲ್ಲಾ ಕಾಮನೆಗಳನ್ನು ತೊರೆದು, ಆತ್ಮನಲ್ಲೇ (ತನ್ನಲ್ಲಿಯೇ) ತೃಪ್ತನಾಗಿರುವನು ಸ್ಥಿತಪ್ರಜ್ಞನೆನಿಸಿಕೊಳ್ಳುತ್ತಾನೆ. (೨-೫೫)*

**ಪ್ರಶ್ನೆ:** ಹೇ ಜನಾರ್ಧನ, 'ಜ್ಞಾನವು ಕರ್ಮಕ್ಕಿಂತ ಉತ್ತಮವಾದುದು' ಎಂಬುದು ನಿನ್ನ ಅಭಿಪ್ರಾಯವಾದರೆ, ಎಲೈ ಕೇಶವನೇ ಏಕೆ ಈ (ಯುದ್ಧವೆಂಬ) ಘೋರ ಕರ್ಮಕ್ಕೆ ನನ್ನನ್ನು ನಿಯೋಜಿಸಿತ್ತಿದ್ದೀಯೆ? (೩-೧)

***ಉತ್ತರ:*** *ಎಲೈ ಪಾಪರಹಿತ ಅರ್ಜುನನೇ, ಹಿಂದೆ ನನ್ನಿಂದಲೇ ಕೊಡಲ್ಪಟ್ಟ ಎರಡು ಮಾರ್ಗಗಳು ಲೋಕದಲ್ಲಿವೆ. ಅವೇ ಸಾಂಖ್ಯರಿಗೆ ಜ್ಞಾನಮಾರ್ಗ ಮತ್ತು ಯೋಗಿಗಳಿಗೆ ಕರ್ಮಮಾರ್ಗ (೩-೩)*

**ಪ್ರಶ್ನೆ:** ಹೇ ವಾರ್ಷ್ಣೇಯನೇ, ಮನುಷ್ಯನು ತಾನು ಬಯಸದಿದ್ದರೂ ಯಾರಿಂದಲೋ ಬಲಾತ್ಕಾರಕ್ಕೆ ಒಳಪಟ್ಟವನಂತೆ ಪಾಪವನ್ನು ಮಾಡುವವನಲ್ಲ. ಇದು ಯಾರ ಪ್ರೇರಣೆಯಿಂದ? (೩-೩೬)

***ಉತ್ತರ:*** *(ಎಲೈ ಅರ್ಜುನನೇ) ಈ ಪ್ರೇರಕನೇ ಕಾಮ. ಇವನಿಗೆ ಇನ್ನೊಂದು ಹೆಸರು ಕ್ರೋಧ. ಇದು ರಜೋಗುಣದಿಂದ ಹುಟ್ಟಿದ್ದು. ಎಲ್ಲವನ್ನೂ ಕಬಳಿಸುವ ಮಹಾಪಾಪಿಯು ಇವನು ಇವನೇ ನಿನ್ನ ವೈರಿ ಎಂಬುದನ್ನು ತಿಳಿದುಕೋ. (೩-೩೭)*

**ಪ್ರಶ್ನೆ:** (ಹೇ ಕೃಷ್ಣನೇ) ನಿನ್ನ ಜನ್ಮವು ಈಚೆಗೆ ಆದುದು, ಸೂರ್ಯನ ಜನ್ಮವು ಹಿಂದೆ ಆದುದು. ಹೀಗಿರುವಲ್ಲಿ ನೀನು ಮೊದಲು ಈ ಯೋಗವನ್ನು ಅವನಿಗೆ (ಸೂರ್ಯನಿಗೆ) ಕಲಿಸಿದೆ ಎಂಬುದನ್ನು ನಾನು ಹೇಗೆ ಅರ್ಥ ಮಾಡಿಕೊಳ್ಳುವೆ? (೪-೪)

***ಉತ್ತರ:*** *ಎಲೈ ಅರ್ಜುನನೇ, ನನಗೂ ನಿನಗೂ ಅನೇಕಾನೇಕ ಜನ್ಮಗಳು ಆಗಿಹೋಗಿವೆ. ಆದರೆ ನಾನು ಅವೆಲ್ಲವನ್ನೂ ಬಲ್ಲೆನು; ಆದರೆ ನೀನು ಅರಿಯೆ (ಮರೆತಿರುವೆ) (೪-೫)*

**ಪ್ರಶ್ನೆ:** ಹೇ ಕೃಷ್ಣನೇ, ನೀನು ಕರ್ಮಗಳ ತ್ಯಾಗವನ್ನೂ ಹೊಗಳುತ್ತೀಯೆ. ಪುನಃ ಅವುಗಳನ್ನು ಮಾಡುವ ಯೋಗವನ್ನೂ ಹೊಗಳುತ್ತೀಯೆ. ಯಾವುದು ಇವೆರಡರಲ್ಲಿ ಉತ್ತಮವೋ ಅದನ್ನು ನನಗೆ ನಿಶ್ಚಯವಾಗಿ ತಿಳಿಸು.(೫-೧)

***ಉತ್ತರ:*** *(ಎಲೈ ಅರ್ಜುನನೇ) ಕರ್ಮವನ್ನು ತ್ಯಾಗ ಮಾಡುವುದು ಮತ್ತು ಕರ್ಮ ಯೋಗದಲ್ಲಿ ತೊಡಗುವುದು ಇವೆರಡೂ ಶ್ರೇಯಸ್ಕರವಾದವುಗಳೇ. ಆದರೆ ಈ ಎರಡರಲ್ಲಿ (ಕರ್ಮ ಸಂನ್ಯಾಸಕ್ಕಿಂತ) ಕರ್ಮಯೋಗವೇ ಹೆಚ್ಚಿನದು. (೫-೨)*

**ಪ್ರಶ್ನೆ:** ಎಲೈ ಮಧುಸೂದನನೇ, ಸಮತ್ವದಿಂದ ಮನಸ್ಸನ್ನು ಇಟ್ಟುಕೊಳ್ಳಬೇಕೆಂದು ನೀನು ಈಗ ಯಾವ ಯೋಗವನ್ನು ಹೇಳಿದೆಯೋ ಆ ಸ್ಥಿತಿಯನ್ನು ಮನಸ್ಸಿನ ಚಂಚಲತೆಯಿಂದ ಸಾಧಿಸಲಾದೀತೆಂದು ಕಾಣುವುದಿಲ್ಲ (೬-೩೩)

***ಉತ್ತರ:*** *ಹೇ ಮಹಾಬಾಹುವೇ, ಮನಸ್ಸು ಚಂಚಲವೆಂಬುದು ನಿಜ. ಅದರ ನಿಗ್ರಹವು ಕಷ್ಟ. ಆದರೂ ಹೇ ಕೌಂತೇಯನೇ ಮನಸ್ಸನ್ನು ಅಭ್ಯಾಸ ಮತ್ತು ವೈರಾಗ್ಯದಿಂದ ಸ್ವಾಧೀನಪಡಿಸಿಕೊಳ್ಳಬಹುದು. (೬-೩೫)*

**ಪ್ರಶ್ನೆ:** ಹೇ ಕೃಷ್ಣ, ಯೋಗಾಭ್ಯಾಸದಲ್ಲಿ ಶ್ರದ್ಧೆಯುಳ್ಳವನು ಸರಿಯಾದ ಪ್ರಯತ್ನವನ್ನು ಸ್ವಲ್ಪ ಮಾಡುತ್ತಿದ್ದು ಪೂರ್ಣ ಸಿದ್ಧಿಯನ್ನು ಪಡೆಯದೇ ಯೋಗದಿಂದ ವಿಚಲಿತನಾದರೆ ಅವನ ಗತಿ ಏನಾಗುವುದು? ಸಾಧನಾ ಮಾರ್ಗದಿಂದ ವಿಚಲಿತನಾದ ವ್ಯಕ್ತಿಯು ಸಿದ್ಧಿಯನ್ನು ಗಳಿಸದೆ ಉಭಯ ಭ್ರಷ್ಟನಾಗಿ ತುಂಡು ಮೋಡದ ಹಾಗೆ ಹಾಳಾಗುವುದಿಲ್ಲವೇ? (೬-೩೭, ೬-೩೮)

***ಉತ್ತರ:*** *ಹೇ ಪಾರ್ಥ, ಇಂತಹವನಿಗೆ (ಯೋಗಭ್ರಷ್ಟನಿಗೆ) ಇಹ ಪರಗಳಲ್ಲಿ ಎಲ್ಲಿಯೂ ಕೆಡುಕಿಲ್ಲ. ಹೇ ತಮ್ಮಾ, ಒಳ್ಳೆಯದನ್ನು ಮಾಡಿದವನು ಎಂದೂ ಕೆಡುವುದಿಲ್ಲ. (೬-೪೦)*

(ಮುಂದಿನ ಪುಟಕ್ಕೆ...)


Copyright © KCO – Brindavana

ಸಂಚಿಕೆ
೧೯
ನವೆಂಬರ್, ೨೦೧೮



## ಅರ್ಜುನನ ಪ್ರಶ್ನೆಗಳು - ಶ್ರೀ ಕೃಷ್ಣ ಪರಮಾತ್ಮನ ಉತ್ತರಗಳು

(.. ಹಿಂದಿನ ಪುಟದಿಂದ)

**ಪ್ರಶ್ನೆ:** ಹೇ ಪುರುಷೋತ್ತಮ, ಬ್ರಹ್ಮವೆಂದರೇನು? ಆಧ್ಯಾತ್ಮವೆಂದರೇನು? ಕರ್ಮವೆಂದರೇನು? ಅಧಿಭೂತ ಎಂದರೆ ಯಾವುದು? ಅಧಿದೈವ ಎಂಬುದು ಯಾವುದು? ಹೇ ಮಧುಸೂದನ, ಈ ದೇಹದಲ್ಲಿ ಅಧಿಯಜ್ಞನು ಯಾರು? ಮತ್ತು ನಿಯತಾತ್ಮರಿಂದ ಅವರ ಕೊನೆಗಾಲದಲ್ಲಿ ನೀನು ಹೇಗೆ ಸ್ಮರಿಸಲ್ಪಡುತ್ತೀಯೆ? (೮-೧,೮-೨)

***ಉತ್ತರ:*** *ನಾಶರಹಿತ ವಸ್ತುವೇ ಪರಬ್ರಹ್ಮ. ಅದರ ಸ್ವಭಾವವೇ ಅಧ್ಯಾತ್ಮ. ಭೂತಕೋಟಿಗಳನ್ನು, ಜೀವಿಗಳನ್ನು ಉತ್ಪನ್ನ ಮಾಡುವ ಸೃಷ್ಟಿ ವ್ಯಾಪಾರವೇ ಕರ್ಮ, ನಾಶವುಳ್ಳ ಶರೀರಗಳು ಅಧಿಭೂತಗಳು, ಸಮಷ್ಟಿ ಜೀವಾಭಿಮಾನಿಯಾದ ಹಿರಣ್ಯಗರ್ಭ ಪುರುಷ ಅಧಿದೈವತವು, ಈ ದೇಹದಲ್ಲಿ ಅಂತರ್ಗಾಮಿಯಾದ ನಾನೇ ಅಧಿಯಜ್ಞನು. ಅಂತ್ಯಕಾಲದಲ್ಲಿ ನನ್ನನ್ನು ಸ್ಮರಿಸುತ್ತಾ ಯಾವನು ಶರೀರವನ್ನು ಬಿಡುತ್ತಾನೋ ಅವನು ನಿಸ್ಸಂಶಯವಾಗಿಯೂ ನನ್ನ ಸ್ವರೂಪವನ್ನೇ ಪಡೆಯುತ್ತಾನೆ. (೮-೩, ೮-೪,೮-೫)*



**ಪ್ರಶ್ನೆ:** ಎಲೈ ಯೋಗಿಯೇ, ನಿನ್ನನ್ನು ಯಾವಾಗಲೂ ಹೇಗೆ ಚಿಂತಿಸಲಿ? ಹೇ ಭಗವಂತನೇ ಯಾವ ವಸ್ತುಗಳಲ್ಲಿ ನಿನ್ನನ್ನು ನಾನು ಚಿಂತಿಸಬೇಕು?

***ಉತ್ತರ:*** *ಹೇ ಕುರುಶ್ರೇಷ್ಠನೇ, ಈಗ ನಾನು ನಿನಗೆ ದಿವ್ಯವಾದ ನನ್ನ ವಿಭೂತಿಗಳಲ್ಲಿ ಮುಖ್ಯವಾದುವುಗಳನ್ನು ತಿಳಿಸುವೆನು. ಹಾಗೆ ವಿವರಿಸಲು ಹೋದರೆ ಅವುಗಳಿಗೆ ಕೊನೆಯೇ ಇಲ್ಲ. ಹೇ ಗುಡಾಕೇಶನೇ, ಎಲ್ಲ ಜೀವಿಗಳ ಹೃದಯದಲ್ಲಿರುವ ಆತ್ಮನು ನಾನು. ಅವುಗಳ ಆದಿ ಮಧ್ಯ ಹಾಗೂ ಅಂತ್ಯವೂ ನಾನೇ. (೧೦-೧೯, ೧೦-೨೦)*

**ಪ್ರಶ್ನೆ:** ಹೇ ಪ್ರಭೋ, ನಿನ್ನ ವಿಶ್ವರೂಪವನ್ನು ನೋಡಲು ನನಗೆ ಯೋಗ್ಯತೆ ಇದೆಯೆಂದು ನಿನಗನ್ನಿಸುವುದಾದರೆ, ಹೇ ಯೋಗೇಶ್ವರನೇ, ನಿನ್ನ ಅವ್ಯಯ ಸ್ವರೂಪವನ್ನು ನನಗೆ ತೋರಿಸು. (೧೧-೧೪)

***ಉತ್ತರ:*** *ಹೇ ಪಾರ್ಥ, ನಾನಾ ವಿಧಗಳಿಂದ, ನಾನಾ ವರ್ಣಗಳಿಂದ ಮತ್ತು ನಾನಾ ಆಕೃತಿಗಳಿಂದ ಕೂಡಿರುವ ದಿವ್ಯವಾದ ನನ್ನ ನಾನಾ ರೂಪಗಳನ್ನು ನೋಡು.(೧೧-೫)*

**ಪ್ರಶ್ನೆ:** ಹೇ ದೇವಾ, ನಿನಗೆ ನಮೋ ನಮಃ, ಏನಿದು ನಿನ್ನ ಲೀಲೆ? ಈ ರೀತಿಯಾಗಿ ಉಗ್ರ ರೂಪವನ್ನು ಧರಿಸಿದ ನೀನು ಯಾರು? ಏತಕ್ಕಾಗಿ ಧರಿಸಿದೆ? (೧೧-೩೧)

***ಉತ್ತರ:*** *ಇಡೀ ಲೋಕವನ್ನು ಕ್ಷಯಗೊಳಿಸುವುದಕ್ಕಾಗಿ ಬೆಳೆದ ಕಾಲಪುರುಷನು ನಾನು. ಎಲ್ಲರನ್ನೂ ನುಂಗಲು ಇದೀಗ ಸಿದ್ಧನಾಗಿದ್ದೇನೆ. ನೀನು ಯುದ್ಧವನ್ನು ಮಾಡದಿದ್ದರೂ ಎದುರಿಗಿರುವ ಯಾರೂ ಉಳಿಯಲಾರರು. (೧೧-೩೨)*

**ಪ್ರಶ್ನೆ:** ಹೇ ಸಹಸ್ರಬಾಹೋ, ಹೇ ವಿಶ್ವರೂಪ, ನಿನ್ನನ್ನು ಹಿಂದಿನಂತೆ ನೋಡಲು ಬಯಸುತ್ತೇನೆ. ಆದ್ದರಿಂದ ಕಿರೀಟವನ್ನು ಧರಿಸಿದ ಚಕ್ರಹಸ್ತದಿಂದ ಕೂಡಿದ, ನಿನ್ನ ಚತುರ್ಭುಜ ರೂಪದಿಂದ ಮೈದೋರು (೧೧-೪೬)

***ಉತ್ತರ:*** *ಹೇ ಅರ್ಜುನ, ನನ್ನ ಈ ಯೋಗಶಕ್ತಿಯ ಪ್ರಭಾವದಿಂದ ಅನಾದಿಯೂ, ಅನಂತವೂ, ತೇಜೋಮಯವೂ ಆದ ವಿಶ್ವರೂಪವನ್ನು ನಿನಗೆ ಅನುಗ್ರಹಿಸಿದೆನು. ನಿನ್ನ ವಿನಾ ಈ ಮೊದಲು ಯಾರೂ ಇದನ್ನು ನೋಡಿರಲಿಲ್ಲ. (೧೧-೪೭)*

**ಪ್ರಶ್ನೆ:** ಹೇ ಜನಾರ್ದನ,ನಿನ್ನ ಈ ಸೌಮ್ಯವಾದ ಮಾನವ ರೂಪವನ್ನು ನೋಡಿ ಶಾಂತನಾದೆ. ನನ್ನ ಚಿತ್ತವು ಸ್ಥಿರವಾಯಿತು. (೧೧-೫೧)

***ಉತರ:*** *ಹೇ ಅರ್ಜುನ, ನೀನು ಕಂಡ ಈ ವಿಶ್ವರೂಪವು ಯಾರಿಗೂ ಸುಲಭವಾಗಿ ದೊರಕುವುದಿಲ್ಲ. ಈ ರೂಪದ ದರ್ಶನಕ್ಕಾಗಿ ದೇವತೆಗಳು ನಿತ್ಯವೂ ಹಾತೊರೆಯುತ್ತಾರೆ. ಈ ವಿಶ್ವರೂಪವನ್ನು ಅನನ್ಯ ಭಕ್ತಿಯಿಂದ ಮಾತ್ರ ನೋಡಬಲ್ಲು ಮತ್ತು ನನ್ನನ್ನು ಸೇರಲು ಸಾಧ್ಯ (೧೧-೫೨, ೧೧-೫೪)*

**ಪ್ರಶ್ನೆ:** ಹೇ ಕೃಷ್ಣ, ಸತತಯುಕ್ತರಾಗಿ ನಿನ್ನ ಸಗುಣ ರೂಪವನ್ನು ಭಜಿಸುವವರು ಶ್ರೇಷ್ಠರೋ? ಅಥವಾ ನಿನ್ನ ನಿರ್ಗುಣ ಸ್ವರೂಪವನ್ನು ಭಜಿಸುವವರು ಶ್ರೇಷ್ಠರೋ? (೧೨-೧)

***ಉತ್ತರ:*** *ಹೇ ಅರ್ಜುನ, ನನ್ನಲ್ಲಿಯೇ ಮನಸ್ಸನ್ನು ನಿಲ್ಲಿಸಿ ಪೂರ್ಣ ಶ್ರದ್ಧೆಯಿಂದ ನನ್ನ ಸಗುಣ ರೂಪವನ್ನು ಎಡೆಬಿಡದೆ ಭಜಿಸುವವರೇ ಶ್ರೇಷ್ಠರು ಎಂದು ನನ್ನ ಅಭಿಪ್ರಾಯ (೧೨-೨)*

**ಪ್ರಶ್ನೆ:** ಹೇ ಕೇಶವ, ಪ್ರಕೃತಿ ಮತ್ತು ಪುರುಷರ ಬಗ್ಗೆ, ಕ್ಷೇತ್ರ ಮತ್ತು ಕ್ಷೇತ್ರಜ್ಞರ ಬಗ್ಗೆ, ಜ್ಞಾನ ಮತ್ತು ಜ್ಞೆಯಗಳ ಬಗ್ಗೆ(I cannot type JnE-Please replace) ತಿಳಿಯಲಿಚ್ಛಿಸುತ್ತೇನೆ (೧೩-೧)

***ಉತ್ತರ:*** *ಹೇ ಕೌಂತೇಯ, ಈ ಶರೀರವೇ ಕ್ಷೇತ್ರ. ಇದನ್ನು ತಿಳಿದವನು ಕ್ಷೇತ್ರಜ್ಞನು. ಎಲ್ಲ ಶರೀರಗಳಲ್ಲಿ ಕ್ಷೇತ್ರಜ್ಞನು ನಾನೇ. ಇವುಗಳ ಜ್ಞಾನವೇ ನಿಜವಾದ ಜ್ಞಾನ. ಪ್ರಕೃತಿ ಮತ್ತು ಪುರುಷ-ಈ ಎರಡೂ ಅನಾದಿಯೆಂದು ತಿಳಿ. ಬುದ್ಧ್ಯಾದಿ ವಿಕಾರಗಳೂ, ಸತ್ವಾದಿ ಗುಣಗಳೂ ಪ್ರಕೃತಿಯಿಂದ ಉಂಟಾದುವುಗಳೆಂದು ತಿಳಿ. (೧೩-೧, ೧೩-೨, ೧೩-೨೦)*

**ಪ್ರಶ್ನೆ:** ಪ್ರಭುವೇ ಈ ಮೂರು ಗುಣಗಳನ್ನು (ಸತ್ವ, ರಾಜಸ್, ತಮಸ್) ಮೀರಿದವನನ್ನು ಯಾವ ಗುರುತುಗಳಿಂದ ತಿಳಿಯಬೇಕು? ಅಂತಹವರ ಆಚಾರವು ಹೇಗಿರುತ್ತದೆ? ಅವರು ಈ ಮೂರು ಗುಣಗಳನ್ನು ಹೇಗೆ ಮೀರುತ್ತಾರೆ?

***ಉತ್ತರ:*** *ಎಲೈ ಪಾಂಡವನೇ, ಈ ಮೂರು ಗುಣಗಳು ಬಂದರೂ ಬೇಡವೆನ್ನದೆ, ಅವು ಹೋದರೂ ಬೇಕೆನ್ನದೆ ಉದಾಸೀನನಾಗಿದ್ದುಕೊಂಡು ಯಾವನು ಕದಲದೆ ಇರುವನೋ ಅವನೇ ಗುಣಾತೀತನು. ಎಲ್ಲರಲ್ಲೂ ಸಮನಾಗಿ ವರ್ತಿಸುವನು. ಯಾವನು ನನ್ನನ್ನು ಅನನ್ಯ ಪ್ರೇಮ ಮತ್ತು ನಿಷ್ಕಪಟ ಭಕ್ತಿಯಿಂದ ಸೇವಿಸುತ್ತಾನೋ ಅವನು ಈ ಮೂರು ಗುಣಗಳನ್ನು ಮೀರಿ ಬ್ರಹ್ಮ ಸ್ವರೂಪವನ್ನು ಹೊಂದಲು ಸಮರ್ಥನಾಗುತ್ತಾನೆ.(೧೪-೨೨, ೧೪-೨೫, ೧೪-೨೬)*

**ಪ್ರಶ್ನೆ:** ಎಲೈ ಕೃಷ್ಣನೇ, ಯಾರು ಶಾಸ್ತ್ರವಿಧಿಯನ್ನು ಬಿಟ್ಟು ಶ್ರದ್ಧೆಯಿಂದ ಪೂಜಿಸುವವರೋ ಅವರ ನಿಷ್ಠೆಯು ಸಾತ್ವಿಕವೋ, ರಾಜಸವೋ ಅಥವಾ ತಾಮಸವೋ? (೧೭-೧)

***ಉತ್ತರ:*** *ಜೀವರಿಗೆ ಸ್ವಭಾವದಿಂದುಂಟಾಗುವ ಶ್ರದ್ಧೆಯು ಮೂರು ಬಗೆ. ಅವೇ ಸಾತ್ವಿಕ, ರಾಜಸ ಹಾಗೂ ತಾಮಸ. ಯಾರ ಶ್ರದ್ಧೆಯಾದರೂ ಅವರವರ ಅಂತಃಕರಣಕ್ಕೆ ತಕ್ಕಂತೆ ಇರುತ್ತದೆ. ಸಾತ್ವಿಕರು ದೇವತೆಗಳನ್ನು ಪೂಜಿಸುತ್ತಾರೆ. ರಾಜಸರು ಯಕ್ಷ, ರಾಕ್ಷಸರನ್ನು ಪೂಜಿಸುತ್ತಾರೆ. ತಾಮಸರು ಪ್ರೇತ, ಭೂತಗಳನ್ನು ಪೂಜಿಸುತ್ತಾರೆ. (೧೭-೨, ೧೭-೩, ೧೭-೪)*

**ಪ್ರಶ್ನೆ:** ಎಲೈ ಹೃಷಿಕೇಶನೇ, ಸಂನ್ಯಾಸದ ತತ್ವವನ್ನು ಹಾಗೂ ತ್ಯಾಗದ ತತ್ವವನ್ನು ತಿಳಿಯಲಿಚ್ಛಿಸುತ್ತೇನೆ. (೧೮-೧)

***ಉತ್ತರ:*** *ಹೇ ಅರ್ಜುನ, ಕಾಮ್ಯ ಕರ್ಮಗಳನ್ನು ಬಿಡುವುದು ಸಂನ್ಯಾಸವೆಂದು, ಸರ್ವ ಕರ್ಮಗಳ ಫಲವನ್ನು ಬಿಡುವುದು ತ್ಯಾಗವೆಂದು ತಿಳಿದವರು ಹೇಳುತ್ತಾರೆ. ಯಜ್ಞ, ದಾನ ಮತ್ತು ತಪವೆಂಬ ಕರ್ಮಗಳನ್ನು ಬಿಡತಕ್ಕದ್ದಲ್ಲ. ಕರ್ಮಗಳ ಸಂಗ ಹಾಗೂ ಫಲವನ್ನು ಬಿಡಬೇಕು, ಕರ್ಮಗಳನ್ನಲ್ಲ. ಹೇ ಅರ್ಜುನ, ಅತ್ಯಂತ ರಹಸ್ಯವಾದ ಜ್ಞಾನವನ್ನು ನಾನು ನಿನಗೆ ಹೇಳಿದ್ದಾಯಿತು. ಇದನ್ನೆಲ್ಲಾ ಸರಿಯಾಗಿ ಮನನ ಮಾಡಿ ನಂತರ ನಿನ್ನ ಇಚ್ಛೆಯಂತೆ ಮಾಡು. (೧೮-೨, ೧೮-೪, ೧೮-೫, ೧೮-೬, ೧೮-೬೩)*

**ಸಾರಾಂಶ:**

ಹೀಗೆ ಮೇಲಿನ ಅರ್ಜುನನ ಪ್ರಶ್ನೆಗಳಿಗೆ ಶ್ರೀಕೃಷ್ಣನು ಉತ್ತರಗಳನ್ನು ನೀಡಿದನು. ಅದನ್ನು ಮನನ ಮಾಡಿದ ಬುದ್ಧಿವಂತನೂ, ಭಕ್ತನೂ ಆದ ಅರ್ಜುನ ೧೮-೭೩ನೇ ಶ್ಲೋಕದಲ್ಲಿ ಹೇಳುತ್ತಾನೆ, "ಹೇ ಅಚ್ಯುತನೇ, ನಿನ್ನ ಅನುಗ್ರಹದಿಂದ ನನ್ನ ಮೋಹವು ತೊಲಗಿತು. ನನ್ನ ಆತ್ಮಸ್ಮೃತಿಯು ನನಗೆ ದೊರಕಿತು. ನನ್ನ ಸಂಶಯಗಳೆಲ್ಲಾ ಹೋಯಿತು. ಇನ್ನು ನೀನು ಹೇಳಿದಂತೆ ಮಾಡುವೆನು."

ಇಂತಹ ಅದ್ಬುತವಾದ ಪ್ರಶ್ನೋತ್ತರದ ಮನನವು ನಮ್ಮ ಸಂದೇಹಗಳನ್ನು ಪರಿಹರಿಸಿ ನಮಗೆ ಸದಾ ಬೆಳಕು ನೀಡಲಿ.



Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಬ್ಬ

## ನವರಾತ್ರಿ ನೆನಪು



ದಾಶರಥಿ ಭಟ್ಟ

ಅಕ್ಟೋಬರ್ ೩೧ ನಮ್ಮ ನೆರೆಹೊರೆಯ ಮಕ್ಕಳೆಲ್ಲಾ ವಿವಿಧ ಹ್ಯಾಲೋವೀನ್ ಪೋಷಾಕುಗಳನ್ನು ಹಾಕಿಕೊಂಡು ಸಂಭ್ರಮದಿಂದ 'ಟ್ರಿಕ್ ಆರ್ ಟ್ರೀಟ್' ಗಾಗಿ ಮನೆ ಮನೆ ತಿರುಗುತ್ತಿದ್ದ ದೃಶ್ಯ ತುಂಬಾ ಮನೋಹರವಾಗಿತ್ತು. ಮಕ್ಕಳಲ್ಲದೆ ಕೆಲವು ದೊಡ್ಡವರೂ ಸೂಪರ್ ಮ್ಯಾನ್, ರಾಣಿ ಎಲಿಝಬೆತ್, ಫೇರಿ ಕ್ವೀನ್ ಗಳ ಪೋಷಾಕುಗಳನ್ನು ಧರಿಸಿ ಮಕ್ಕಳ ಜೊತೆಗೂಡಿದ್ದರು. ನಸುಗತ್ತಲ ಸಂಜೆಯ ಹಿನ್ನೆಲೆಯಲ್ಲಿ, ಕಾಲ್ಪನಿಕ ಪಾತ್ರಗಳಿಗೆ ಮತ್ತು ಐತಿಹಾಸಿಕ ವ್ಯಕ್ತಿಗಳಿಗೆ ಜೀವ ಬಂದಂತೆ ಹ್ಯಾಲೋವೀನ್ ಗುಂಪು ಕಾಣುತ್ತಿತ್ತು.

ನಡೆದಾಡುವ ಈ ಜೀವಂತ ಬೊಂಬೆಗಳನ್ನು ನೋಡುತ್ತಿದ್ದಾಗ ನನಗೆ ನಮ್ಮ ದಸರಾ ಬೊಂಬೆಗಳು ನೆನಪಾಯಿತು. ದಸರಾದಲ್ಲಿ ಬೊಂಬೆಗಳನ್ನು ಅಲಂಕರಿಸಿ ಒಂಬತ್ತು ದಿನ ಮನೆಯಲ್ಲಿ ಕೂರಿಸಿದ್ದರೆ, ಇಲ್ಲಿ ಹ್ಯಾಲೋವೀನ್ ಒಂದು ದಿನ ಮಾತ್ರ ಬೊಂಬೆಗಳೇ ಮನೆ ಮನೆ ತಿರುಗುತ್ತವೆ. ನವರಾತ್ರಿಯಲ್ಲಿ ಸಂಜೆಯಾಗುತ್ತಿದ್ದಂತೆಯೇ ಬೊಂಬೆಗಳಿಗೆ ಗಡಿಬಿಡಿ. ನೋಡಲು ಬರುವ ಮಕ್ಕಳು ಮರಿಗಳಿಗೆ, ಜನಗಳಿಗೆ ಒಳ್ಳೆ ಪೋಸು ಕೊಟ್ಟುಕೊಂಡು ಚೆನ್ನಾಗಿ ಕಾಣಬೇಕು. ಬಂದವರಿಗೆ ಚಕ್ಕುಲಿಯೋ, ನಿಪ್ಪಟ್ಟು-ಕೋಡುಬಳೆಗಳೋ, ಏನೂ ಇಲ್ಲದಿದ್ದರೆ ಒಂದು ಪೆಪ್ಪರ್ಮಿಂಟ್ ತುಂಡೋ ಹವಣಿಸಿಕೊಳ್ಳಬೇಕು. ಎಷ್ಟೆಲ್ಲಾ ಕೆಲಸಗಳು! ಹಾಗೆಯೇ ಹ್ಯಾಲೋವೀನ್ ಗೂ ಅಷ್ಟೇ-ಎಷ್ಟು ಮಕ್ಕಳು ಟ್ರಿಕ್ ಆರ್ ಟ್ರೀಟ್ ಗೆ ಬರುತ್ತಾರೆಂಬ ಅಂದಾಜಿನ ಮೇಲೆ ಆ ದಿನದ ಮುಂಚಿನ ವೀಕೆಂಡು ಕಾಸ್ಕೋ ಗೋ, ವಾಲ್ಮಾರ್ಟ್ಗೋ ಹೋಗಿ ಒಂದಷ್ಟು ಕ್ಯಾಂಡಿಗಳನ್ನು ತಂದಿಟ್ಟುಕೊಂಡಿರಬೇಕು. ಅದನ್ನು ಒಂದು ಪ್ಲಾಸ್ಟಿಕ್ ಹ್ಯಾಲೋವೀನ್ ಕುಂಬಳ ಕಾಯಲ್ಲಿಟ್ಟುಕೊಂಡು, ಬಂದ ಪ್ರತಿ ಮಗುವಿಗೂ-ಅದರ ಕಾಸ್ಟ್ಯೂಮ್ ನಂತಹದು ಈ ಪ್ರಪಂಚದಲ್ಲಿ ಎಲ್ಲಿಯೂ ನೋಡಿಲ್ಲವೆಂದು ಹೊಗಳಿ ಒಂದಷ್ಟು ಕ್ಯಾಂಡಿ ಕೊಡುವುದು. ಕತ್ತಲು ದಟ್ಟವಾಗಿ, ಇರುಳು ಸರಿಯುತ್ತಿದ್ದಂತೆ ಈ ಸಂಭ್ರಮವೂ ತಣ್ಣಗಾಗುತ್ತದೆ.



ಚಿತ್ರ : ಎಂ.ವಿ. ಸಾಯಿರಾಂ.

ಈ ದಸರಾಕ್ಕೆ ನಮ್ಮ ಮನೆಯಲ್ಲಿ ಪಟ್ಟದ ಬೊಂಬೆಗಳನ್ನು ಮಾತ್ರ ಇಟ್ಟಿದ್ದೆವು. ನವರಾತ್ರಿ ಹಬ್ಬದಲ್ಲಿ ಶಾಸ್ತ್ರಕ್ಕಾದರೂ ಬೊಂಬೆ ಕೂಡಿಸದಿದ್ದರೆ ಹೇಗೆ? ಹೀಗಾಗಿ ಪಟ್ಟದ ಬೊಂಬೆಗಳು, ಎರಡು ಆನೆ ಮತ್ತು ಒಂದು ಅಂಬಾರಿ. ಇಷ್ಟರಲ್ಲಿ ನಮ್ಮ ಬೊಂಬೆ ಪ್ರದರ್ಶನ ಮುಗಿಸಿಬಿಟ್ಟೆವು. ಎಲ್ಲಾ ಸಂಸ್ಕೃತಿಗಳಲ್ಲೂ ಇದೆಯೋ ಇಲ್ಲವೋ ಗೊತ್ತಿಲ್ಲ, ನಮ್ಮ ಕಡೆ ಮದುವೆಯಾದ ಮೇಲೆ, ಹೆಣ್ಣಿನ ಮನೆಯವರು ಗಂಡು-ಹೆಣ್ಣಿನ ಜೋಡಿ ಬೊಂಬೆಯನ್ನೂ ಮದುಮಗಳ ಜೊತೆ ಕಳಿಸುವ ಸಂಪ್ರದಾಯ ಉಂಟು. ಹೊಸದಾಗಿ ಮದುವೆಯಾದವರು ಈ ಬೊಂಬೆಗಳಂತೆ ಅಂತಲೋ, ಅಥವಾ ಈ ಬೊಂಬೆಗಳಂತೆ ನಗು ನಗುತ್ತಾ ಬಾಳಲಿ ಅಂತಲೋ ಯಾರಿಗೆ ಗೊತ್ತು? ಈ ಬೊಂಬೆಗಳು ೨೬ ವರ್ಷದಿಂದ ನಾವು ಗುಳೆ ಹೋದದಲ್ಲೆಲ್ಲಾ ನಮ್ಮ ಜೊತೆ ಬಂದು ಸಂಸಾರ ಹೂಡಿ, ಈಗ ಅಮೆರಿಕಾದಲ್ಲಿ ನೆಲೆ ನಿಂತಿವೆ. ಯಾವುದೇ ವೀಸಾ ತಲೆ ನೋವಿಲ್ಲದೆ ಬಂದು, ಈ ನೆಲದಲ್ಲಿ ನೆಲೆ ನಿಂತ ಗಂಡು-ಹೆಣ್ಣುಗಳು ಅವು ಮಾತ್ರ ಇರಬೇಕು! ಬೊಂಬೆ ಹಬ್ಬದಲ್ಲಿ ಇವೇ ಪಟ್ಟದ ಗೊಂಬೆಗಳು. ಆದರೆ ನ್ಯೂಜೆರ್ಸಿಯ ನಮ್ಮ ಗೆಳೆಯರ ಮನೆಗಳಲ್ಲೆಲ್ಲಾ ತುಂಬಾ ಚೆನ್ನಾಗಿ ಬೊಂಬೆ ಕೂಡಿಸಿ ಸಂಭ್ರಮಿಸಿದರು. ದಶಾವತಾರದ ಕಥೆಯಿಂದ ಹಿಡಿದು, ಇತ್ತೀಚಿನ ವರ್ತಮಾನದವರೆಗೂ ವಿವಿಧ ಗೊಂಬೆಗಳು, ಅವುಗಳಿಗೆ ಅದ್ದೂರಿ ಅಲಂಕಾರ, ಝಗ ಝಗಿಸುವ ಬೆಳಕಿನಲ್ಲಿ ಗೊಂಬೆಗಳ ಮೋಡಿ. ಒಂದೊಂದು ಸಂಜೆ ಒಬ್ಬೊಬ್ಬರ ಮನೆಯಂತೆ ಊಟಕ್ಕಿಂತ ಹೆಚ್ಚಿನ ಗಡದ್ದು ಉಪಹಾರವೂ ಸಿಕ್ಕಿತು.

ಈಗ ಕೂಡಿಸುವ ಗೊಂಬೆಗಳಲ್ಲಿ ಎಷ್ಟೇ ಅಲಂಕಾರ-ಆಡಂಬರಗಳಿದ್ದರೂ, ನನ್ನ ಬಾಲ್ಯದ ನಮ್ಮೂರಿನ ಗೊಂಬೆ ಹಬ್ಬದ ಸಂಭ್ರಮ ಇವುಗಳಲ್ಲೆಲ್ಲಾ ಬರುವುದಿಲ್ಲ. ಅವೇನೂ ಈಗಿನ ಬೊಂಬೆಗಳಿಗಿಂತಾ ಸುಂದರವಾಗಿಯೂ, ಅದ್ದೂರಿಯಾಗಿಯೂ ಇರುತ್ತಿದ್ದವೆಂದಲ್ಲ. ಆಗಿನ ದಿನಗಳಲ್ಲಿ ನಮ್ಮ ಸಂಪೂರ್ಣ ಗಮನ ಅವುಗಳಲ್ಲೇ ಕೇಂದ್ರೀಕೃತವಾಗಿರುತ್ತಿತ್ತು ಎಂದು.

ನಮ್ಮೂರಿನಲ್ಲಿ ಬೊಂಬೆಗಳನ್ನು ಇಡುತ್ತಿದ್ದುದೇ ಕೆಲವೇ ಮನೆಗಳಲ್ಲಿ. ಅದರಲ್ಲೂ ನಮ್ಮ ಮನೆಯಲ್ಲಿ ನಮ್ಮ ಅಮ್ಮನಿಗೆ ಬೊಂಬೆ ಇಡುವುದರಲ್ಲಿ ಆಸೆ ಮತ್ತು ಆಸಕ್ತಿಯೇ ಹೊರತು, ಇನ್ನೆಲ್ಲರೂ ಆ ಕಾರ್ಯದಲ್ಲಿ ತಣ್ಣೀರು ಎರಚುವವರೇ. ತುಬಾ ಹೆಚ್ಚು ಬೊಂಬೆಗಳನ್ನು, ತುಂಬಾ ಚೆನ್ನಾಗಿ ಇಡುತ್ತಿದ್ದುದು ರಾಜಯ್ಯಂಗಾರ್ ಮನೆಯಲ್ಲಿ. ಆದರೆ ಅವರ ಮನೆಗೆ ಹೋಗಲು ಅಜ್ಜಿಯಿಂದ ನಮಗೆ ಪರ್ಮಿಷನ್ ಇರಲಿಲ್ಲ. ನಾವು ಹೊಲಕ್ಕೆ ಹೋಗಿ ಬರುವಾಗ ಅವರ ಮನೆಯ ಮುಂದಿನಿಂದ ಹಾದು ಬರುತ್ತಿದ್ದೆವು. ರಾಜಯ್ಯಂಗಾರ ಪತ್ನಿ ಕಮಲಮ್ಮನವರು ಮನೆ ಹೊರಗಡೆ ಇದ್ದರೆ, ನಮ್ಮನ್ನು ಕರೆಯುತ್ತಿದ್ದರು. ಅಜ್ಜಿಯ ಹೆದರಿಕೆಗೆ ನಾವು ಮನೆಯೊಳಗೇ ಹೋಗದೆ ಓಡಿ ಮನೆಗೆ ಬಂದುಬಿಡುತ್ತಿದ್ದೆವು. ರಾಜಯ್ಯಂಗಾರ್ ಮಗ ರಾಮಶೇಷಣ್ಣಯ್ಯ ನಮ್ಮ ತಂದೆಯ ಸ್ಟೂಡೆಂಟ್ ಅಷ್ಟೇ ಅಲ್ಲದೆ, ಹೈಸ್ಕೂಲ್ ಟೀಚರ್ ಆಗಿದ್ದು, ನವರಾತ್ರಿಯ ಯಾವುದಾದರೂ ಒಂದು ದಿನ ನಮ್ಮ ತಂದೆಯವರನ್ನು ಅವರ ಮನೆಗೆ ಕರೆಯುತ್ತಿದ್ದರು. ತಂದೆಯವರು ಅಲ್ಲಿಗೆ ಹೋದಾಗ ನಾವೂ ಹಿಂದೆ ಓಡುತ್ತಿದ್ದೆವು. ಬೊಂಬೆ ಪ್ರದರ್ಶನಕ್ಕಿಂತ ಹೆಚ್ಚಾಗಿ ಅವರ ಮನೆಯಲ್ಲಿ ಕೊಡುತ್ತಿದ್ದ ಕೋಡುಬಳೆ, ನಿಪ್ಪಟ್ಟುಗಳ ಆಕರ್ಷಣೆ ನಮಗೆ ಜೋರಾಗಿತ್ತು. ನಾನು ನೋಡಿದಂತೆ ತಮಿಳು ಸಂಸ್ಕೃತಿಯ ಮನೆಗಳಲ್ಲೇ ಬೊಂಬೆ ಆರ್ಭಟ, ಅಲಂಕಾರ ಜೋರು. ಎಲ್ಲೋ ಓದಿದಂತೆ ಬೊಂಬೆ ಸಂಸ್ಕೃತಿ ಕನ್ನಡ ನಾಡಿನಲ್ಲಿ ಪ್ರಾರಂಭವಾಗಿದ್ದೇ, ಮಹಾರಾಜರು ತಮಿಳುನಾಡಿನಲ್ಲಿ ಈ ಬೊಂಬೆ ಆಚರಣೆಯನ್ನು ನೋಡಿ ಆಕರ್ಷಿತರಾಗಿ ಮೈಸೂರು ರಾಜ್ಯದಲ್ಲೂ ಅದನ್ನು ಪ್ರಾರಂಭಿಸಿದ್ದರಿಂದ. ಇಲ್ಲದಿದ್ದರೆ ನಮ್ಮ ಹಳ್ಳಿಗಾಡಿನ ಯಾವ ಮನೆಗಳಲ್ಲಿ ಬೊಂಬೆಗಳನ್ನಿಡುತ್ತಾರೆ ಹೇಳಿ? ಬೊಂಬೆ ಇಡುವುದು ಪಟ್ಟಣದ ಹಾಗೂ ಆಸಕ್ತಿ ಇರುವ ಮನೆಗಳಲ್ಲಿ ಮಾತ್ರ. ಮತ್ತೊಂದು ವಿಶೇಷವೆಂದರೆ ನಮಗೆ ಸಿಗುವ ಪಟ್ಟದ ಗೊಂಬೆಗಳೆಲ್ಲಾ ದ್ರಾವಿಡ ವೇಷ ಭೂಷಣಗಳನ್ನು ಧರಿಸಿದ ದ್ರಾವಿಡ ಲಕ್ಷಣಗಳ ಹೆಣ್ಣು, ಗಂಡುಗಳೇ.

ಇನ್ನು ನಮ್ಮ ತಾಯಿಯ ಅಣ್ಣನವರಾದ ಸೀನಮಾವನಿಗೆ ಎಲ್ಲ ಹಬ್ಬದ ಸಂಭ್ರಮಗಳಲ್ಲಿಯೂ ತುಂಬಾ ಆಸಕ್ತಿ. ಗಣೇಶನ ಹಬ್ಬಕ್ಕೆ ಅವರೇ ಎಲ್ಲಿಂದಾದರೂ ಜೇಡಿ ಮಣ್ಣು ತಂದು, ಒಂದು ದಿನವಿಡೀ ಅದನ್ನು ನೆನೆಸಿಟ್ಟು, ಹದವಾಗಿ ಕಲೆಸಿ ಸುಂದರವಾದ ಗಣಪತಿಯ ಮೂರ್ತಿಯನ್ನು ಮಾಡುತ್ತಿದ್ದರು. ಹಾಗೆಯೇ ದಸರಾ ಬೊಂಬೆಗಳ ವಿಚಾರದಲ್ಲೂ ಅವರದು ಹೆಚ್ಚು ಸಂಭ್ರಮ.

ಈ ದಸರಾ ಸಮಯದಲ್ಲಿ ನಮಗೆ ಪೂರ್ತಿ ಹತ್ತು ದಿನ ರಜಾ ಇರುತ್ತಿತ್ತು. ೨೦೦ ಮನೆಗಳು ಕೂಡ ಇಲ್ಲದಿದ್ದ ಊರಲ್ಲಿ ವೇಳೆ ಕಳೆಯುವುದು ಹೇಗೆ? ಗುಂಪು ಕಟ್ಟಿಕೊಂಡು ಅಲ್ಲಿ ಇಲ್ಲಿ ಸುತ್ತುವುದು, ಯಾವುದೋ ಮರದ ಕೆಳಗೆ ಗಿಲ್ಲಿ-ದಾಂಡೋ, ಲಗೋರಿಯೊ ಸ್ವಲ್ಪ ಹೊತ್ತು ಆಡುವುದು, ದೊಡ್ಡವರು ಕೂತು ಮಾತಾಡುತ್ತಿದ್ದ ಕಡೆಗಳಲ್ಲಿ ಅವರು ಬಯ್ದು ಓಡಿಸುವವರೆಗೂ ನಿಂತಿರುವುದು, ಹೊಟ್ಟೆ ಚುರುಗುಟ್ಟಿದಾಗಲೆಲ್ಲಾ ಮನೆಗೆ ಬಂದು ಏನಾದರೂ ತಿನ್ನಲು ಕೊಡಲು ಅಮ್ಮನನ್ನು ಪೀಡಿಸುವುದು. ಇಂತಹ ದಿನಚರಿಯ ನಮಗೆ, ಮಾವ ಅಟ್ಟದ ಮೇಲಿಟ್ಟಿದ್ದ ಬೊಂಬೆಗಳನ್ನೆಲ್ಲಾ ತೆಗೆದು ಹಜಾರದಲ್ಲಿ ಹರಡಿಕೊಂಡಿದ್ದಾನೆ ಎಂಬ ಸುದ್ದಿ ತಿಳಿದ ತಕ್ಷಣ ಪರಮಾನಂದವಾಗಿಬಿಡುತ್ತಿತ್ತು. ತಕ್ಷಣ ಅವರ ಮನೆಗೆ ನನ್ನ ಓಟ. ಮಾವನ ಮನೆಯಲ್ಲಿ ಹೆಚ್ಚಾಗಿ ಮರದ ಬೊಂಬೆಗಳೇ ಇದ್ದವು. ಅದರಲ್ಲೂ ವಿವಿಧ ಗಾತ್ರದ ರಾಜ ರಾಣಿಯರು. ಬೊಂಬೆಗಳ ಪ್ರಪಂಚದಲ್ಲಿ ಎಲ್ಲಾ ಹೆಣ್ಣು ಗಂಡುಗಳೂ ರಾಜ ರಾಣಿಯರೇ. ಅವುಗಳಲ್ಲೆಲ್ಲಾ ದೊಡ್ಡ ಜೋಡಿಯನ್ನು ಪಟ್ಟದ ರಾಣಿ ಮತ್ತು ರಾಜ ಎಂದುಕೊಳ್ಳುತ್ತಿದ್ದರು.

(ಮುಂದಿನ ಪುಟಕ್ಕೆ...)


Copyright © KCO – Brindavana

ಸಂಚಿಕೆ
೧೯
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



(.. ಹಿಂದಿನ ಪುಟದಿಂದ)

## ನವರಾತ್ರಿ ನೆನಪು

ಮಾವ ಬೊಂಬೆ ಹಬ್ಬಕ್ಕೆ ಮಾಡಿಕೊಳ್ಳುತ್ತಿದ್ದ ತಯಾರಿಯೇ ದೊಡ್ಡದು. ಮನೆಯಲ್ಲಿದ್ದ ಟಿನ್ ಡಬ್ಬಗಳನ್ನೂ, ಇದ್ದ ಒಂದೇ ಒಂದು ಬೆಂಚನ್ನೂ ಸರಿಮಾಡಿಕೊಳ್ಳುವುದು; ನಂತರ ನಡುಮನೆಗೆ ಅವನ್ನು ಸಾಗಿಸುವುದು; ಡಬ್ಬಗಳನ್ನು ಎರಡೂ ಬದಿ ಇಟ್ಟು, ಅವುಗಳ ಮೇಲೆ ಹಲಗೆ ಜೋಡಿಸಿ, ಮೆಟ್ಟಿಲು ಮೆಟ್ಟಿಲಾಗಿ ಬೊಂಬೆ ಮಂಟಪ ಮಾಡುವುದು. ಈ ಮೆಟ್ಟಿಲುಗಳ ಮುಂದೆ ಇರುವ ಕೊನೆಯ ಮೆಟ್ಟಿಲೇ ಬೆಂಚು. ಬೆಂಚು ಬೊಂಬೆಗಳ ಪೀಠವಷ್ಟೇ ಅಲ್ಲ, ಹಿಂದುಗಡೆ ಜೋಡಿಸಿದ್ದ ಡಬ್ಬ ಹಲಗೆಗಳಿಗೆ ಆಧಾರವೂ ಹೌದು. ಇವುಗಳ ಮೇಲೆ ಹಳೇ ಪಂಚೆ, ಸೀರೆಗಳನ್ನು ವಿನ್ಯಾಸಗಳಲ್ಲಿ ಹಾಸಿದರೆ, ಬೊಂಬೆ ಮಂಟಪ ರೆಡಿ. ಬೊಂಬೆಗಳ ಅಲಂಕಾರಕ್ಕೆ ಉಪಯೋಗಿಸುತ್ತಿದ್ದುದು ಬಣ್ಣದ ಪೇಪರ್ ಗಳನ್ನು ಮತ್ತು ಥಳ ಥಳ ಹೊಳೆಯುವ ಸುನೇರಿ ಕಾಗದಗಳನ್ನು. ಕೆಲವೊಮ್ಮೆ ಸಿಗರೇಟು ಸೇದುವವರನ್ನು ಕೇಳಿ, ಸಿಗರೇಟು ಪ್ಯಾಕಿನೊಳಗಿರುವ ಹೊಳೆಯುವ ಬೆಳ್ಳಿ ಬಣ್ಣದ ಕಾಗದಗಳನ್ನೂ ಸಂಗ್ರಹಿಸಿಟ್ಟುಕೊಂಡಿರುತ್ತಿದ್ದ. ನವರಾತ್ರಿಗೆ ಮುಂಚಿನ ಯಾವುದಾದರೂ ಶನಿವಾರ ಕೋಲಾರ ಪೇಟೆಗೋ, ಶ್ರೀನಿವಾಸಪುರ ಪೇಟೆಗೋ ಹೋಗಿ ಬಣ್ಣ ಬಣ್ಣದ ಕಾಗದಗಳನ್ನು ಕೊಂಡು ತಂದು ಜೋಪಾನವಾಗಿರಿಸುತ್ತಿದ್ದ.

ಹಬ್ಬಕ್ಕೆ ಮುಂಚಿನ ಮಧ್ಯಾಹ್ನಗಳು ಬೊಂಬೆ ಅಲಂಕಾರಕ್ಕೇ ಮೀಸಲು. ಮೈದಾ ಹಿಟ್ಟನ್ನು ನೀರಿನಲ್ಲಿ ಬೆರೆಸಿ, ಚೆನ್ನಾಗಿ ಕುದಿಸಿ ಪೇಸ್ಟಿನ ಹದಕ್ಕೆ ಹಿಟ್ಟು ತಯಾರಿಸುವುದು. ಇದೇ ಪೇಪರ್ ಗಳನ್ನು ಅಂಟಿಸಲು ಗ್ಲೂ. ನಂತರ ಬೊಂಬೆಗಳನ್ನೆಲ್ಲಾ ನೀರಿನಲ್ಲಿ ತೊಳೆದು, ಬಟ್ಟೆಯಿಂದ ಒರೆಸುವುದು. ಪ್ರತಿ ಬೊಂಬೆಯನ್ನೂ ತೆಗೆದುಕೊಂಡು, ಅಳತೆ ನೋಡಿಕೊಂಡು ಅದರ ಪ್ಯಾಂಟು ಷರ್ಟಿಗೋ, ಸೀರೆಗೋ ಪೇಪರ್ ಕತ್ತರಿಸಿಕೊಂಡು, ನಾಜೂಕಾಗಿ ಪೋಷಾಕು ಮಾಡಿ ಅಂಟಿಸುವುದು. ನಾವೆಲ್ಲಾ ಸುತ್ತಲೂ ಕೂತು ಇದನ್ನು ನೋಡುತ್ತಾ ಬೆರಗಾಗುವುದು. ಗಂಡು ಬೊಂಬೆಗಳಿಗೆ ಪ್ಯಾಂಟು, ಧೋತಿ, ಷರ್ಟು, ಕೋಟು, ಪೇಟ; ಹೆಣ್ಣುಗಳಿಗಾದರೆ ಬಣ್ಣದ ಸೀರೆಗಳು, ಅವುಗಳ ಮೇಲೆ ಪುಟ್ಟ ಪುಟ್ಟ ಬುಟ್ಟಾಗಳು, ಮೇಲ್ವಸ್ತ್ರ - ಇವು ಒಂದೊಂದಕ್ಕೂ ಬೇರೆ ಬೇರೆ ಬಣ್ಣ, ವಿನ್ಯಾಸ - ತನ್ನಲ್ಲಿದ್ದ ಪರಿಕರಗಳಲ್ಲಿ ಮಾವ ನಾಜೂಕಾಗಿ ಇವನ್ನು ನಿರ್ವಹಿಸುತ್ತಿದ್ದ. ಆ ದಿನಕ್ಕೆ ಕೆಲಸ ಮುಗಿಯದಿದ್ದರೆ, ಮಾರನೇ ದಿನದ ಮಧ್ಯಾಹ್ನದವರೆಗೆ ಕಾಯುವುದು.

ಎಲ್ಲಾ ಸಿದ್ಧವಾದ ಮೇಲೆ ಮಂಟಪದ ಮೆಟ್ಟಿಲುಗಳ ಮೇಲೆ ತನ್ನ ರೀತಿಯಲ್ಲೇ ಜೋಡಿಸುತ್ತಿದ್ದ. ಮರದ ಬೊಂಬೆಗಳ ಜೊತೆ ಮಣ್ಣಿನ ಆನೆ, ಕುದುರೆ, ಸಿಂಹ- ಇಂತಹ ಪ್ರಾಣಿಗಳು; ಪ್ಲಾಸ್ಟಿಕ್ ನ ಒಂದಷ್ಟು ಬೊಂಬೆಗಳು; ಮರದ ಪುಟ್ಟ ದೋಣಿಗಳಲ್ಲಿ ಮರಳು ಹಾಕಿ ಬೆಳೆಸಿದ ಪುಟ್ಟ ರಾಗಿ, ಬತ್ತದ ಹೊಲಗಳು, ಅವುಗಳಲ್ಲಿ ಹಕ್ಕಿ ಗೂಡು- ಹೀಗೆ ಆ ಕುಗ್ರಾಮದಲ್ಲಿ ಅದೇ ಒಂದು ದೊಡ್ಡ ಬೆರಗು.

ನವರಾತ್ರಿ ಬೊಂಬೆಗಳಿಡುವವರೆಗೂ ನಮಗೆ ಅವುಗಳ ಅಲಂಕಾರ, ಸಿದ್ಧತೆಗಳ ಗೀಳಾದರೆ, ನವರಾತ್ರಿಯಲ್ಲಿ –ಇದ್ದ ಒಂದೆರಡು ಮನೆಗಳಿಗೆ ತಿರುಗುವ ಆಸೆ. ರಾತ್ರಿ ದೀಪ ಹಚ್ಚಿದ ಮೇಲೆ ಮನೆಯಿಂದ ಹೊರಗೆ ತಿರುಗಾಡುವ ಹಾಗಿಲ್ಲ ಎಂಬ ಫರ್ಮಾನಿಗೆ ನವರಾತ್ರಿ ದಿನಗಳಲ್ಲಿ ಮಾತ್ರ ರಿಯಾಯ್ತಿ ಇತ್ತು. ನಾವೂ ಬೊಂಬೆ ನೋಡಲು ಹೋಗುವ ರಾಧಕ್ಕ, ಮಣಿ, ಜಲಜಕ್ಕರ ಹಿಂದೆ ಮನೆ ತಿರುಗುವುದು. ಅವರುಗಳು ಹೇಳುವ ಹಾಡುಗಳು ಎಷ್ಟು ಹೊತ್ತಿಗೆ ಮುಗಿದು ನಮಗೇನಾದರೂ ಬೊಂಬೆ ಬಾಗಿನದ ತಿಂಡಿ ಸಿಗುತ್ತದೇನೋ ಅಂತ ಕಾಯುವುದು. ನೋಡಿದ ಬೊಂಬೆಗಳನ್ನೇ ನೋಡುವ ಆಸಕ್ತಿಗಿಂತ, ನಮ್ಮ ದೃಷ್ಟಿ ಆರತಿ ಮುಗಿದ ಮೇಲೆ ಸಿಗುವ ಅಂಗ್ಯೆಯಗಲ ನಿಪ್ಪಟ್ಟೋ, ಒಂದು ಸುತ್ತಿನ ಕೋಡುಬಳೆಯೋ - ಇವುಗಳ ಮೇಲೆ. ಇಲ್ಲಿನ ಮತ್ತು ಈಗಿನ ಮಕ್ಕಳಿಗೆ ನ್ಯಾಚೊಗಳು, ಡೋರಿಟೋಗಳೂ ಸಿಗುವಂತೆ ನಮ್ಮಗಳಿಗೆ ಏನಾದರೂ ಇದ್ದಿದ್ದರೆ ತಾನೇ? ಊಟ ಬಿಟ್ಟರೆ ತಿನ್ನಲು ಸಿಗುತ್ತಿದ್ದುದು ಬೈಗಳು ಮಾತ್ರ.

ಆಗಿನ ಸಂಭ್ರಮದ ನೆನಪೇ ಈಗಲೂ ಸಂತೋಷದ ಸಂಭ್ರಮ.

## ಆ ನನ್ನ ಅಮೇರಿಕಾ ಪಯಣ



ಹರಿಣಿ .ಬಿ .ಎಸ್ .ರಾವ್

ನಾನು ಬಹಳ ವರುಷಗಳ ನಂತರ ಮನೆಮಂದಿಯೊಂದಿಗೆ ಮತ್ತೆ ಅಮೇರಿಕಾಗೆ ಹೋಗುವ ಸಂದರ್ಭ ಒದಗಿ ಬಂತು. ನೆಪ ಏನೆಂದರೆ, ಸೊಸೆಯ ಅಣ್ಣನ ಮಗನಿಗೆ ನ್ಯೂ ಜೆರ್ಸಿಯ ಪುತ್ತಿಗೆ ಮಠದಲ್ಲಿ ಉಪನಯನ. ಮೊದಲು ನನ್ನ ಸೊಸೆ ಮತ್ತು ಮೊಮ್ಮಕ್ಕಳು ಹೊರಟರು. ಸೊಸೆಯ ಅಕ್ಕ ಮತ್ತು ಅಣ್ಣ, ತಮ್ಮ ತಮ್ಮ ಕುಟುಂಬದೊಂದಿಗೆ ಅಮೇರಿಕಾದಲ್ಲಿ ನೆಲೆಸಿದ್ದಾರೆ, ಹಾಗಾಗಿ, ಅವರೊಂದಿಗೆ ಹೆಚ್ಚಿನ ಸಮಯ ಕಳೆಯುವ ಉದ್ದೇಶ. ನಾನು, ನನ್ನ ಮಗ ನಂತರ ಹೋದೆವು. ಹೋದ ಎರಡನೇ ದಿನವೇ ಗಾಳಿ, ಬೆಳಕು ತುಂಬಿದ ಎಲ್ಲೆಲ್ಲೂ ಶುಭ್ರತೆ ತುಂಬಿದ ವಾತಾವರಣದ ಮಠದಲ್ಲಿ ಉಪನಯನ ಜರುಗಿತು. ನಂತರ ಉಡುಪಿ ಅಡುಗೆಯ ಭರ್ಜರಿ ಊಟ. ಇನ್ನೂ ನೆನೆದರೆ ಬಾಯಲ್ಲಿ ನೀರೂರಿಸುವಂತಿದೆ. ಅದರಲ್ಲೂ ಬಡಿಸುವ ಕೆಲಸಕ್ಕೆ, ಹೆಚ್ಚು ಜನ ಸಹಾಯ ಇಲ್ಲದ ಜಾಗದಲ್ಲಿ, ಸ್ನೇಹಿತರೂ, ಬಂಧು-ಮಿತ್ರರೂ ಸೇರಿ ಕಾರ್ಯ ನಿರ್ವಹಣೆ ಮಾಡಿದ್ದು ನೋಡಲು ಬಹಳ ಆನಂದವಾಗಿತ್ತು.

ಮತ್ತೆರಡು ದಿನದಲ್ಲೇ ಮತ್ತೊಂದು ಕಾರ್ಯಕ್ರಮ. ಅದೇ ಅಲ್ಲಿನ ಕನ್ನಡಿಗರು, ಬೃಂದಾವನ ಕನ್ನಡ ಕೂಟ ಎಂಬ ಹೆಸರಲ್ಲಿ ನಡೆಸುವ ಕಾರ್ಯಕ್ರಮಗಳು. ಮುಖ್ಯವಾಗಿ ಮಕ್ಕಳು ಭಾಗವಹಿಸುವ ನಾಟಕ, ಹಾಡುಗಳು, ನಾಟ್ಯ ಮುಂತಾದ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಎಲ್ಲಾ ಕಾರ್ಯಕ್ರಮಗಳು ಕನ್ನಡದಲ್ಲೇ ಇರುತ್ತವೆ. ಈ ಸಾರಿ ಯುಗಾದಿ ಪ್ರಯುಕ್ತ ನಡೆಸಿದ ಕಾರ್ಯಕ್ರಮಗಳನ್ನು, ಏಪ್ರಿಲ್ಲಿನಲ್ಲಿ ಇಟ್ಟುಕೊಂಡಿದ್ದರು. ಆ ಸಮಯದಲ್ಲಿ ನಾನು ಅಲ್ಲಿದ್ದರಿಂದ, ನನ್ನನ್ನು, ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದರು. ಅದಕ್ಕಾಗಿ ಅಭಿಮಾನಿ ತಂಡದ ಎಲ್ಲರಿಗೂ ಧನ್ಯವಾದಗಳು. ಇದಕ್ಕೆ ಕಾರಣ ನನ್ನ ಸೊಸೆಯ ಸಹೋದರಿ ಸೌ.ಅರ್ಚನಾ ಆಚಾರ್ಯ. ಈ ಸಂಘದ ಕನ್ನಡ ಶಾಲೆಯ ಚಟುವಟಿಕೆಗಳಲ್ಲಿ ಉಮ್ಮೇದಿನಿಂದ, ಉತ್ಸಾಹದಿಂದ ಅವಳೂ, ಅವಳ ಜೊತೆ ಇನ್ನೂ ಕೆಲವು ಸ್ವಯಂಸೇವಕರು, ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ಸ್ವಂತ ಕೆಲಸಗಳನ್ನು ಪಕ್ಕಕ್ಕಿಟ್ಟು, ಹೀಗೇ ಕನ್ನಡ ಶಾಲೆಗಾಗಿ, ಈ ಕನ್ನಡ ಪ್ರೇಮಿಗಳು ಕಾರ್ಯ ನಿರ್ವಹಿಸುತ್ತಾ ಬಂದಿದ್ದಾರೆ.

ನಾನು ವಸಂತೋತ್ಸವ/ಯುಗಾದಿ ಕಾರ್ಯಕ್ರಮಕ್ಕೆ ಹೋದೆ. ಒಳಗೆ ಹೋಗುವಾಗಲೇ ಕಸ್ತೂರಿ ಕನ್ನಡದ ಘಮಲು, ಎಲ್ಲಾ ಕಡೆ ಹರಡಿ, ವಾತಾವರಣ ಮನಸ್ಸಿಗೆ ಉಲ್ಲಾಸ ತಂದಿತ್ತು. ಹೇಳಿದ ಸಮಯಕ್ಕೆ ಸ್ವಲ್ಪ ತಡವಾಗಿ ಕಾರ್ಯಕ್ರಮ ಶುರುವಾದರೂ, ನನಗೇನು ಬೇಸರವಾಗಿಲ್ಲ. ಅಲ್ಲಿದ್ದ ಅನೇಕ ಕನ್ನಡ ಭಾಷಾ-ಪ್ರೇಮಿಗಳು ಹಾಗೂ ಕನ್ನಡ ಚಿತ್ರ ಪ್ರೇಮಿಗಳನ್ನು ಮಾತನಾಡಿಸುವ ಅವಕಾಶ ಸಿಕ್ಕಿತು. ಸುಮಾರು 40 ವರ್ಷಗಳ ಹಿಂದೆಯೇ ನಿವೃತ್ತಳಾದ ನನ್ನ ಚಿತ್ರಗಳ ಬಗ್ಗೆ ಅವರು ನೆನಪಿಟ್ಟು ಮಾತಾಡಿದ್ದು, ನನಗೆ ಆಶ್ಚರ್ಯವೂ, ಹಾಗೂ ಕನ್ನಡ ಚಿತ್ರಗಳ ಮೇಲಿನ ಅವರ ಆಸಕ್ತಿ ನೋಡಿ, ಆನಂದವೂ ಆಯಿತು. ಕಾರ್ಯಕ್ರಮಗಳು ಚೆನ್ನಾಗಿತ್ತು. ಅದರಲ್ಲೂ, ಮಕ್ಕಳ ಹಾಡುಗಳು ಹಾಗೂ ಅಭಿನಯ ಎಲ್ಲವೂ ತುಂಬಾ ಸೊಗಸಾಗಿತ್ತು. ಹೊರನಾಡಲ್ಲಿ ಇದ್ದುಕೊಂಡು ಮಕ್ಕಳು ಕನ್ನಡವನ್ನು ಕಲಿತು, ಉಳಿಸಿಕೊಳ್ಳುತ್ತಿರುವುದು ಒಳ್ಳೆಯ ವಿಷಯ.

ಮತ್ತೆ, ಪೊಗದಸ್ತಾದ ಕರ್ನಾಟಕ ಶೈಲಿಯ ಊಟ. ಕೊನೆಯಲ್ಲಿ ಬೆಂಗಳೂರಿನಿಂದ ಬಂದ ಸಂಗೀತ ತಂಡದ ಕಾರ್ಯಕ್ರಮವಿತ್ತು. ಆರ್ಕೆಸ್ಟ್ರಾ, ಗಾಯನ ಸೊಗಸಾಗಿತ್ತು.

ಅಂತೂ ನನ್ನ ನ್ಯೂ ಜೆರ್ಸಿಯ 'ಕನ್ನಡ ' ಟ್ರಿಪ್ ಎಂದೂ ಮರೆಯದ ಅನುಭವ- ಮತ್ತೆ, ಮತ್ತೆ ಮೆಲುಕುವಂತಿತ್ತು.




Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಪ್ರವಾಸ ಕಥನ

### *ನಾ ನೋಡಿದ ಅಮೇರಿಕ !!*



ವರ್ಷ ನ್ಯಾಮತಿ

ಸುಮಾರು ೨೭ ವರ್ಷಗಳ ಮುಂಚೆ ನನ್ನಣ್ಣನಿಗೆ ಅಮೇರಿಕಾಗೆ ಹೋಗುವ ಅವಕಾಶ ದೊರತಾಗ ಅಮ್ಮನಿಗೆ ಹಬ್ಬದ ಸಂಭ್ರಮವಾದರೆ, ನನ್ನಪ್ಪನಿಗೆ ಮಗ ತಮ್ಮನ್ನು ಮೀರಿಸಿ ಬೆಳೆಯುತ್ತಿದ್ದಾನೆಂಬ ಹೆಮ್ಮೆ. ಆದರೆ, ಇದ್ದೊಬ್ಬ ಅಣ್ಣ, ನನ್ನ ಅಚ್ಚು ಮೆಚ್ಚಿನ ಸಂಗಾತಿ, ದೂರದ ಅಮೇರಿಕಾಗೆ ಹೋಗುತ್ತಿದ್ದಾನೆಂಬ ದುಃಖ, ತಳಮಳ ನನಗೆ. ನೋಡು ನೋಡುತ್ತಿದ್ದಂತೆ, ಅವನು ಹೊರಡುವ ದಿನ ಬಂದೇ ಬಿಟ್ಟಿತು. ಬೀಳ್ಕೊಡಲೆಂದು ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಬಂದಾಗ ನನ್ನಣ್ಣನನ್ನು ಅಪ್ಪಿಕೊಂಡು ಬಿಕ್ಕಳಿಸಿದ್ದು, ಇಂದಿಗೂ ನೆನಪಿದೆ.

ನನ್ನಣ್ಣ ಹೇಳುತ್ತಿದ್ದ ಕಥೆಗಳಿಂದ, ಕಳಿಸುತ್ತಿದ್ದ ಫೋಟೋಗಳಿಂದ, ಅಮೇರಿಕಾದ ಬಗ್ಗೆ ಹೊಸ ಹೊಸ ಕಲ್ಪನೆಗಳು, ವಿಚಾರಗಳು ತಿಳಿಯತೊಡಗಿದವು. ಒಂದಿಲ್ಲೊಂದು ದಿನ ದೂರದ ಅಮೇರಿಕಾ ನೋಡುವ ಕನಸು ಗರಿಗೆದರತೊಡಗಿ, ಅಮೇರಿಕಾದ ಕಲ್ಪನಾ ಲೋಕದಲ್ಲಿ ತೇಲುತ್ತಿದ್ದ ನನ್ನೆದುರಿಗೆ, ನನ್ನಪ್ಪ ಧುತ್ತೆಂದು ಹುಡುಗನನ್ನು ನಿಲ್ಲಿಸಿ, ನಿನ್ನ ಮದುವೆ ಇವನೊಂದಿಗೆ ಎಂದು ತೀರ್ಮಾನಿಸಿಯೇ ಬಿಟ್ಟರು. ದಿನ ಕಳೆದಂತೆ, ಸಂಸಾರದ ಜಂಜಾಟದ ನಡುವೆ ನನ್ನ ಅಮೇರಿಕಾದ ಕಲ್ಪನೆ, ಕನಸುಗಳು ಎಲ್ಲಿ ಮರೆಯಯ್ತೋ ನಾಕಾಣೆ.

ಅದೊಂದು ಸುದಿನ, ನಾನು ನನ್ನ ಮಗನ ಜೊತೆ ಬೇಸಿಗೆ ರಜಾ ದಿನಗಳಲ್ಲಿ ಸಿಂಗಪುರ್, ಥೈಲ್ಯಾಂಡ್ ಹೋಗುವ ಬಗ್ಗೆ ಚರ್ಚೆ ನಡೆಸುತ್ತಿದ್ದೆ. ಚರ್ಚೆ ಸ್ವಲ್ಪ ಬಿಸಿಯಾಗಿಯೇ ನಡೆಯುತ್ತಿತ್ತು. ಆಗ ಅಲ್ಲಿಯೇ ಕುಳಿತಿದ್ದ ನನ್ನ ಪತಿರಾಯ, ನಾವ್ಯಾಕೆ ಅಮೇರಿಕಾಗೆ ಹೋಗಬಾರದು ಎಂದು ಕೇಳಿದರು. ಒಬ್ಬರನ್ನೊಬ್ಬರ ಮುಖ ನೋಡಿಕೊಂಡ ನಾನು ಮತ್ತು ನನ್ನ ಮಗ ತಟ್ಟಂಥ ಒಪ್ಪಿಗೆ ಕೊಟ್ಟೇ ಬಿಟ್ವಿ. ಅದೇ ದಿನ ಅಮೇರಿಕಾದಲ್ಲಿರುವ ನನ್ನ ಇನ್ನೊಬ್ಬ ತಮ್ಮನಿಗೆ ಪಟ್ಟಂತ ಮೆಸೇಜ್ ಕೂಡ ಹೋಯಿತು. ನೋಡು ನೋಡುತ್ತಿದ್ದಂತೆ, ಅಮೇರಿಕಾಗೆ ಹೋಗುವ ಎಲ್ಲಾ ತಯಾರಿಯೂ ಆಗಿ ಹೋಯ್ತು. ಆ ದಿನ ಜೆ.ಎಫ್.ಕೆ ವಿಮಾನ ನಿಲ್ದಾಣದಲ್ಲಿ ಇಳಿದಾಗ, ನನ್ನನ್ನು ನಾನು ಜಿಗುಟಿಕೊಂಡು, ನಾನು ಕಾಣುತ್ತಿರುವುದು ಕನಸಲ್ಲವೆಂಬುದನ್ನ ಖಾತರಿ ಮಾಡಿಕೊಂಡೆ.




ತಮ್ಮನ ಕಾರಲ್ಲಿ ಕುಳಿತು ಹೊರ ಬರುತ್ತಿದ್ದಂತೆ, ನೆನಪಾದ ಹಾಡು, ನನ್ನ ಪ್ರೀತಿಯ ಹುಡುಗಿ ಸಿನೆಮಾದ, ಸೊಂಟಕ್ಕೆ ಬೆಲ್ಟು ಕಟ್ಟಿಕೊಂಡು, ಫ್ರೀವೇನಲ್ಲಿ ಹಾರಿಕೊಂಡು ಎಕ್ಸಿಟ್ನಲ್ಲಿ ಜಾರಿಕೊಳ್ತರೋ.....ನಮ್ಮೂರಲ್ಲಿ ಹಂಗೆನಿಲ್ಲಾ ಬಸ್ನಲ್ಲ್ ಜಾಗ ಸಾಕಾಗಲ್ಲಾ ಟಾಪ್ನಲ್ ಕೂತು ಬೀಡಿ ಸೇದ್ತಾರೇ.

ಜೆಟ್ ಲಾಗ್ ಪ್ರಭಾವ ಕಡಿಮೆ ಮಾಡಲು ನನ್ನ ತಮ್ಮ ಮಲಗಬೇಡಿರೆಂಬ ಸೂಚನೆ ಕೊಡುತ್ತಲೇ ಇದ್ದರೂ ಕಣ್ರೆಪ್ಪೆ ಭಾರವಾಗುತ್ತಲೇ ಇತ್ತು, ಈ ಜೆಟ್ ಲಾಗ್ ನಿಂದ ನನ್ನ ಸ್ಥಿತಿ ಕುಡುಕರ ಪರಿಸ್ಥಿತಿಯಾಗಿತ್ತು. ನಡೆದಾಡಿದರೆ ತಪ್ಪು ಹೆಜ್ಜೆ ಇಡುತ್ತಿದ್ದೇನೆಂಬ ಅನುಭವ, ಕುಳಿತರೆ ನಿದ್ದೆಯ ಜೋರು ಜೋಂಪು. ಅಬ್ಬ! ಈ ಜೆಟ್ ಲಾಗ್ನಿಂದ ಹೊರಬರುವುದು ಒಂದು ದೊಡ್ಡ ಸಾಹಸವೇ ಸರಿ.

ಮಾರನೇ ದಿನ ಮನೆಯ ಹತ್ತಿರವಿದ್ದ ಮಾಲ್ಗೆ ಭೇಟಿ ಕೊಡುವ ಮೂಲಕ ಅಮೇರಿಕಾದ ದಿನಚರಿ ಶುರುವಾಯಿತು. ಮುಂಬಯಿ ನಗರಿಯಲ್ಲಿರುವ ನನಗೆ ಮಾಲ್ಗಳೇನೂ ಹೊಸದಲ್ಲ. ಆದರೆ ನೋಡುತ್ತಾ ಹೋದಂತೆ ವ್ಯತ್ಯಾಸಗಳ ಅರಿವಾಗತೊಡಗಿತು. ಇಲ್ಲಿ ಕೇವಲ ಎರಡೇ ಅಂತಸ್ತಿನ ಕಟ್ಟಡ. ನಮ್ಮಲ್ಲಿಯ ಮಾಲ್ಗಳ ಹಾಗೆ, ಎತ್ತರಕ್ಕೆ ಏರದೆ ಉದ್ದಗಲಕ್ಕೆ ಹರಡಿಕೊಂಡಿತ್ತು. ಕಟ್ಟಡದ ಮುಂದಿನ ವಿಶಾಲವಾದ ಪಾರ್ಕಿಂಗ್ ಆವರಣದಲ್ಲಿ ಸಾಲಾಗಿ, ಅಚ್ಚು ಕಟ್ಟಾಗಿ ನಿಲ್ಲಿಸಿದ್ದ ಕಾರುಗಳು. ಮಾಲ್ಗೆ ನೂರಾರು ಕಾರುಗಳು ಬಂದು ಹೋಗಿ ಮಾಡುತ್ತಿದ್ದರೂ, ಸ್ವಲ್ಪವೂ ಸದ್ದು ಗದ್ದಲವಿಲ್ಲ. ಕೀವ್ ಗುಟ್ಟುವ ಹಾರ್ನ್ ಅಂತೂ ಇಲ್ಲವೇ ಇಲ್ಲ. ಅವಶ್ಯಕತೆ ಇದ್ದರೆ ಮಾತ್ರ ಮಾಲ್ ಮುಂದೆಯೇ ಇಳಿಯುವ ಅಥವಾ ಹತ್ತುವ ಜನರ ಶಿಷ್ಟಾಚಾರ ಮೆಚ್ಚಬೇಕು. ರೋಡ್ ಕ್ರಾಸ್ ಮಾಡಲು ಮೊದಲ ಆದ್ಯತೆ ಪಾದಚಾರಿಗಳಿಗೆ. ಸುತ್ತ ಮುತ್ತ ಹಚ್ಚ ತಿಳಿ ನೀಲಿ ಬಣ್ಣದ ಮುಗಿಲು. ಈ ಮುಗಿಲು ನಮ್ಮ ಸಿನಿಮಾಗಳಲ್ಲಿ ಡುಯಟ್ ಹಾಡುವಾಗ ತೋರಿಸುವ ಸ್ವಚ್ಚಂದವಾದ ಮುಗಿಲನ್ನು ನೆನಪಿಸುತ್ತಿತ್ತು. ಉಸಿರಾಡುತ್ತಿದ್ದರೆ, ಮತ್ತಷ್ಟು ಗಾಳಿಯನ್ನ ಎಳೆದುಕೊಳ್ಳಬೇಕೆಂಬ ಆಸೆಯಾಗುವಷ್ಟು ಸ್ವಚ್ಛವಾದ ಗಾಳಿ. ನಾನು ನಗರದಲ್ಲಿದ್ದೇನೆ ಎಂಬುದನ್ನ ನಂಬಲಿಕ್ಕೆ ಅಸಾಧ್ಯವಾದ ವಾತಾವರಣ. ಎರಡನೆಯ ದಿನ ನನ್ನ ತಮ್ಮ ನಮ್ಮನ್ನೆಲ್ಲಾ ನಯಾಗರಾ ಫಾಲ್ಸ್ ಕರೆದುಕೊಂಡು ಹೊರಟ. ನಾವು ಸಾಗುವ ಹಾದಿಯಲ್ಲೇ ಇದ್ದ ಶೃಂಗೇರಿಯ ಶಾರದಾಂಬೆ ದೇವಸ್ಥಾನಕ್ಕೆ ಭೇಟಿ ನೀಡಿದ್ದಾಯಿತು. ಅಚ್ಚುಕಟ್ಟಾದ ಪ್ರಶಾಂತವಾದ ದೇವಸ್ಥಾನ. ಸುಂದರವಾದ ಶಾರದಾಂಬೆ ಮೂರ್ತಿ, ಜೊತೆಗೆ ಭಾರತದ ನಾಲ್ಕೈದು ಭಾಷೆಗಳೊಂದಿಗೆ ಇಂಗ್ಲೀಷ್ನಲ್ಲಿ ಸುಲಲಿತವಾಗಿ ಮಾತಾಡಬಲ್ಲ ಸಂಸ್ಕೃತ ಪಂಡಿತರು. ನಮ್ಮಲ್ಲಿ ಚಪ್ಪಲಿ ಕಳ್ಳರಿದ್ದಾರೆ ಎಚ್ಚರಿಕೆ ಎಂಬ ಬೋರ್ಡ್, ಆದರೆ ಇಲ್ಲಿ ಹಾಕಿಕೊಂಡಿರುವ ಉಡುಪು ಸರಿಯಾಗಿರಲಿ ಎಂಬ ಎಚ್ಚರಿಕೆ ಬೋರ್ಡ್. ಅದಕ್ಕಾಗಿ ಸುತ್ತಿಕೊಳ್ಳಲು ಪಂಚೆ ಶಲ್ಯ ಕೂಡ ಲಭ್ಯ!! ನಮ್ಮ ಭಾರತೀಯರು ತಾವು ಅಮೇರಿಕಾಗೆ ಹೋಗಿ ನೆಲೆಸುವುದರ ಜೊತೆಗೆ ನಮ್ಮ ಪರಂಪರೆ, ಆಚರಣೆಗಳನ್ನ ಕೂಡ ಕೊಂಡೊಯ್ದಿರುವ ಪ್ರಯತ್ನವನ್ನು ಮನಸಾರೆ ಅಭಿನಂದಿಸಬೇಕು.

ನಮ್ಮ ಪ್ರಯಾಣ ಮುಂದುವರೆಯಿತು. ಹೈವೇನಲ್ಲಿ ಸ್ವಲ್ಪ ದೂರ ಸಾಗಿದ ಮೇಲೆ ಕಾಫೀ ತಿಂಡಿಗೆಂದು ಒಂದು ಹೋಟೆಲ್ಗೆ ಹೋದ್ವಿ. ನನ್ನ ತಮ್ಮ ನಾವು ಸಾಗ ಬೇಕಾದ ದಾರಿ ತುಂಬಾ ಇದೆ ಎಂದು ಪಾರ್ಸಲ್ ತಗೊಂಡ. ತಿಂಡಿ ಜೊತೆಗೆ ಕಾಫೀ ಕೂಡ ಪಾರ್ಸಲ್!! ಘಮ ಘಮ ಅನ್ನೋ ಬಿಸಿ ಬಿಸಿ ಕಾಫೀಯನ್ನು ಕುಳಿತು, ಕುಡಿದು ಹೊರಟರೆ ಇವನಜ್ಜನ ಗಂಟೇನಾದರೂ ಹೋಗುತ್ತಾ ಅಂತಾ ಬೈಕೊಂಡೇ ಕಾರು ಹತ್ತಿದೆ. ಆಶ್ಚರ್ಯ ಏನು ಗೊತ್ತಾ? ನಾವು ಮನೆಯಲ್ಲಿ ಕಾಫೀ ಕುಡಿಯೋ ಹಾಗೆ, ಆರಾಮವಾಗಿ ಕಪ್ ಹಿಡಿದು, ಅರವತ್ತರಿಂದ ಎಂಬತ್ತು ಮೈಲು ಸ್ಪೀಡ್ನಲ್ಲಿ ಚಲಿಸೋ ಕಾರಿನಲ್ಲಿ ಕುಳಿತು ಕಾಫೀ ಕುಡಿದದ್ದಾಯಿತು. ನಮ್ಮೂರಲ್ಲಿ, ಬಾಟಲ್ ಹಿಡ್ಕೊಂಡು ಎರಡು ಗುಟುಕು ನೀರು ಕುಡೀಲಿಕ್ಕೆ ಕಾರಿನ ಸ್ಪೀಡ್ ಕಡಿಮೆ ಮಾಡಿದರೂ, ನೀರು ಮೂಗಲ್ಲಿ ಹೋಗುತ್ತೆ, ಮೈಮೇಲೂ ಚೆಲ್ಲುತ್ತೆ. ಇಲ್ಲಿಯ ರೋಡ್ಗಳಲ್ಲಿ ಸ್ಪೀಡ್ ಬ್ರೇಕ್ಗಳಿಲ್ಲ, ಪಾಟ್ ಹೋಲ್ಗಳಿಲ್ಲ, ಎಚ್ಚರ ತಪ್ಪಿ ವಾಹನ ಚಲಾಯಿಸುವ ಚಾಲಕರಿಲ್ಲ. ಶಿಸ್ತು ಬದ್ಧವಾಗಿ, ಇರುವೆಯ ಸಾಲಿನಂತೆ ಒಂದರ ಹಿಂದೆ ಒಂದು ಕಾರು ಸಾಗುವ ರೀತಿ ನೋಡಲಿಕ್ಕೆ ಒಂದು ಚೆಂದ. ಇಲ್ಲಿಯ ಹೈವೇಗಳ ಮತ್ತೊಂದು ವಿಶೇಷ ಕಾರ್ ಪೂಲ್, ಅಂದ್ರೆ ಕಾರಿನಲ್ಲಿ ಇಬ್ಬರಿಗಿಂತ ಜಾಸ್ತಿ ಜನ ಇದ್ದರೆ ಅವರಿಗೇ ಅಂತಲೇ ಒಂದು ವಿಶೇಷವಾದ ಲೇನ್. ಟ್ರಾಫಿಕ್ ಕಡಿಮೆ ಮಾಡಲಿಕ್ಕೆ ಇಲ್ಲಿಯ ಸರ್ಕಾರ ಜನರಿಗೆ ಕೊಟ್ಟಿರೋ ಒಂದು ಒಳ್ಳೆಯ ಸೌಕರ್ಯ.

ಹಾದಿಯಲ್ಲೇ ಬರುವ ವಾಟ್‌ಕಿನ್ಸ್ ಗ್ಲೆನ್ ಸ್ಟೇಟ್ ಪಾರ್ಕ್ ಮತ್ತು ಕಾರ್ನಿಂಗ್ ಗ್ಲಾಸ್ ಫ್ಯಾಕ್ಟ್ರಿ ನೋಡಿಕೊಂಡು ನಯಾಗರಾ ಫಾಲ್ಸ್ ಮುಟ್ಟಿದಾಗ ರಾತ್ರಿಯಾಗಿತ್ತು. ಆ ದಿನ ಮಳೆ ಬಂದ ಕಾರಣ ಸಿಡಿ ಮದ್ದು ಪ್ರದರ್ಶನ ರದ್ದಾಗಿ, ಸ್ವಲ್ಪ ಮನಸ್ಸಿಗೆ ಬೇಸರವಾಯಿತು. ಬಣ್ಣ ಬಣ್ಣದ ಬೆಳಕಲ್ಲಿ ಮಿಂಚುವ ನಯಾಗರಾ ಫಾಲ್ಸ್ ಮತ್ತು ಎದುರಿಗೆ ಮಿನುಗುವ ಕೆನಡಾ ದೇಶದ ಕ್ಯಾಸಿನೋಗಳನ್ನು ನೋಡಿದ್ದಾಯಿತು. ಮುಂಜಾನೆ ನಯಾಗರಾದಲ್ಲಿರುವ "ಮೇಡ್ ಆಫ್ ದ ಮಿಸ್ಟ್" ಗೆ ಭೇಟಿ. ನೂರಾರು ಜನರಿರುವ ಬೋಟ್ ನಲ್ಲಿ ಧುಮ್ಮಿಕ್ಕುವ ಜಲಧಾರೆಯ ತುಂಬಾ ಹತ್ತಿರಕ್ಕೆ ಕರೆದೊಯ್ಯಲಾಗುತ್ತದೆ. ಇಷ್ಟೊಂದು ಹತ್ತಿರದಿಂದ ಜಲಧಾರೆಯನ್ನ ನೋಡುವ ರೋಮಾಂಚನಕ್ಕೆ, ನಮ್ಮ ಹೃದಯದ ಬಡಿತ ಹೆಚ್ಚಾಗಿ ಜಲಧಾರೆಯ ಭೋರ್ಗರೆತವನ್ನೂ ಮೀರಿಸುವಲ್ಲಿ ಅನುಮಾನವೇ ಇಲ್ಲ. ಬದುಕಿದೆಯಾ ಬಡ ಜೀವವೇ ಎಂದು ಉಸಿರೆಳೆದುಕೊಳ್ಳುವುದರಲ್ಲಿ ನನ್ನ ತಮ್ಮ ಬೇಗ ಬೇಗ ಬಾ ಎಂದು "ಕೇವ್ ಆಫ್ ದ ವಿಂಡ್ಸ್" ಎಳೆದೊಯ್ದ. ಚಿಕ್ಕದಾದ ಒಂದು ಗುಹೆಯ ಒಳನುಸುಳಿ ಹೊರಬಂದರೆ ಅತ್ಯಂತ ರಭಸದಿಂದ, ನೂರಾರು ಅಡಿ ಎತ್ತರದಿಂದ ಬೀಳುವ ನಯಾಗರಾ ಜಲಧಾರೆಯನ್ನು ನಮ್ಮ ಕೈಯಾರೆ ಮುಟ್ಟಲು ಸಾಧ್ಯ. ಇದೊಂದು ಮೈನವಿರೇಳುಸುವ ಅನುಭವ.

(೧೦ ನೆಯ ಪುಟಕ್ಕೆ)


Copyright © KCO – Brindavana

ಸಂಚಿಕೆ
೧೯
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## "ಮೊದಲ ಹೆಸರು ಗೊತ್ತಿಲ್ಲ, ಮೊದಲ ಹೆಸರು ಇಟ್ಟಿಲ್ಲಾ....."



ಪ್ರಸಾದ್ ನಾಗಭೂಷಣ


**ಈ** ಶೀರ್ಷಿಕೆಯನ್ನು ನೋಡಿ ನೀವೆಲ್ಲರೂ ಈ ಲೇಖನವನ್ನು ಯಾವೋದೋ ರೋಮಾಂಚಕ ಪತ್ತೇದಾರಿ ಕಾದಂಬರಿ ತರಹ ಇರಬಹುದೆಂದು ಅಂದುಕೊಂಡಿರಾ? ಖಂಡಿತ ಅಲ್ಲ... ಇದು ಅಮೇರಿಕಾದಲ್ಲಿ ನನಗೆ ಆದ ಸ್ವಂತ ಅನುಭವಗಳು. ಅನುಭವಕ್ಕಿಂತ ಫಜೀತಿಗಳು ಅಂದರೆ ತಪ್ಪಾಗಲಾರದು. ಹಾಗಾದರೆ ಏನಿದು "ಮೊದಲ ಹೆಸರು ಗೊತ್ತಿಲ್ಲ"? ನಿಮ್ಮ ಪಾಸ್ ಪೋರ್ಟ್ ನಲ್ಲಿ ಉಪನಾಮ(Surname)ನಮೂದಿಸಲ್ಪಡುವ ಜಾಗ ಖಾಲಿ ಇದ್ದರೆ ಅಮೇರಿಕಾದ ವೀಸಾ ಅವಶ್ಯಕತೆ ಪ್ರಕಾರ ಪಾಸ್‌ಪೋರ್ಟ್‌ನಲ್ಲಿ ಮೊದಲ ಹೆಸರು ಏನು ಇರೋತ್ತದೋ ಅದನ್ನು ಉಪನಾಮ (Surname) ಸ್ಥಳದಲ್ಲಿ ಹಾಕಿ ಮೊದಲ ಹೆಸರ ಜಾಗದಲ್ಲಿ FNU (First Name Unkown) ಅಥವಾ ನಮ್ಮ ಅಚ್ಚ ಕನ್ನಡದಲ್ಲಿ ಹೇಳುವುದಾದರೆ "ಮೊದಲ ಹೆಸರು ಗೊತ್ತಿಲ್ಲ" ಅಂತ ವೀಸಾದಲ್ಲಿ ಮುದ್ರಿಸುತ್ತಾರೆ. ಈ ಪರಿಸ್ಥಿತಿ ನನಗೂ ದುರಾದೃಷ್ಟವಶಾತ್ ಬಂದೇಬಿಟ್ಟಿತು.

ನನ್ನ ಪೂರ್ಣ ನಾಮಧೇಯ "ಪ್ರಸಾದ್ ನಾಗಭೂಷಣ". "ನಾಗಭೂಷಣ" ನನ್ನ ತಂದೆಯ ಹೆಸರು. "ಪ್ರಸಾದ್" ಎಂಬುದು ನನ್ನ ಹೆಸರು. ಇಂಜಿನಿಯರಿಂಗ್ ಕಾಲೇಜ್ ನಲ್ಲಿ ಓದುತ್ತಿರುವಾಗ ಪಾಸ್‌ಪೋರ್ಟ್ ಏಜೆಂಟ್ ಒಬ್ಬರನ್ನು ಹಿಡಿದು ಭಯಂಕರ ಚೌಕಾಸಿ ಮಾಡಿ ಪಾಸ್‌ಪೋರ್ಟ್ ಮಾಡಿಸಿದೆ. ಆ ವಯ್ಯ ನನ್ನ ಚೌಕಾಸಿಗೆ ತಕ್ಕಂತೆ ಪಾಸ್‌ಪೋರ್ಟ್ ಅಪ್ಲಿಕೇಶನ್ ಫಾರ್ಮ್ ನಲ್ಲಿ ಉಪನಾಮ (Surname) ಜಾಗವನ್ನು ಖಾಲಿಯಾಗೆ ಬಿಟ್ಟು ಬಿಟ್ಟ. ಮೇಲಾಗಿ ನನಗೆ ವಂಶಕ್ಕೆ ಸಂಬಂಧಿಸಿದ ಅಥವಾ ಜಾತಿಗೆ ಸಂಬಂಧಿಸಿದ ಅಥವಾ ಹುಟ್ಟಿದ ಊರಿಗೆ ಸಂಬಂಧಿಸಿದ ಕೊನೆಯ ಹೆಸರನ್ನು ನನ್ನ ತಂದೆಯವರು ಶಾಲೆಗೆ ಸೇರಿಸುವಾಗ ದಾಖಲಿಸಲಿಲ್ಲ. ಅವರಿಗೇನು ಗೊತ್ತಿತ್ತು ಮುಂದೆ ಇದು ನನ್ನನ್ನು ಏನೆಲ್ಲ ಫಜೀತಿಗೆ ಈಡು ಮಾಡುತ್ತದೆ ಅಂತ. ನಾನು ಕೊನೆಯ ಹೆಸರನ್ನು ಹಾಗೆ ಬಿಟ್ಟಿದ್ದೀರಲ್ಲ ಅಂತ ಏಜೆಂಟ್ ಗೆ ಹೇಳಿದರೂ ಆತ "ಅದು ಜಾತಿ ಪ್ರಕಾರದ ಹೆಸರಿಗೆ ಮಾತ್ರ ಸೀಮಿತ, ನಿನಗೆ ಜಾತಿ ಪ್ರಕಾರ ಕೊನೆ ಹೆಸರಿಲ್ಲ, ಅದನ್ನು ಖಾಲಿಬಿಡಬೇಕು" ಎಂದ. ನಾನು ಸರಿ ಇದೇನು ದೊಡ್ಡ ವಿಷಯ ಪಾಸ್‌ಪೋರ್ಟ್ ಆದರೆ ಸಾಕು ಅಂತ ಸುಮ್ಮನಾದೆ. ಇನ್ನೊಂದು ೫೦ ರೂಪಾಯಿ ಜಾಸ್ತಿ ಕೊಟ್ಟಿದ್ದರೆ ಆತ ನನ್ನ ಮಾತಿಗೆ ಒಪ್ಪಿರುತ್ತಿದ್ದನೇನೋ.

ಸರಿ, ವಿಷಯಕ್ಕೆ ಬರ್ತೀನಿ. ನನಗೆ ನನ್ನ ಕಂಪನಿಯಿಂದ ಅಮೇರಿಕಾಗೆ ಹೋಗುವ ಅವಕಾಶ ಸಿಕ್ಕಿತು. ವೀಸಾ ಸಹ ದೊರಕಿತು. ಅದರಲ್ಲಿ ನನ್ನ ಹೆಸರು FNU PRSAD NAGBHUSHANA ಅಂತ ಮುದ್ರಿಸಿತ್ತು. ಮೊದಲು ನಾನು ಏನಿದು ವಿಚಿತ್ರ ಅಂತ ಅಂದುಕೊಂಡರೂ, ಅಮೇರಿಕಾಗೆ ಹೋಗುತ್ತಿದ್ದೇನಲ್ಲ ಎಂಬ ಸಂತೋಷದಲ್ಲಿ ಈ ವಿಚಿತ್ರವನ್ನು ಅಲ್ಲಿಗೆ ಮರೆತುಬಿಟ್ಟೆ. ಹೆಸರು ತಾನೇ, ಅದೇನು ಮಹಾ ಅಂತ ನಿರ್ಲಕ್ಷ್ಯ ಮಾಡಿಬಿಟ್ಟೆ. ನನ್ನ ಗಮನವೆಲ್ಲ ಅಮೇರಿಕಕ್ಕೆ ಏನೇನು ಕೊಂಡೊಯ್ಯಬೇಕು ಎನ್ನುವಲ್ಲಿ ಇತ್ತು. ಅದೇ MTR ರೆಡಿಮೇಡ್ ಮಿಕ್ಸ್ ಪ್ಯಾಕೆಟ್‌ಗಳು, Maggi ನೂಡಲ್ಸ್ ಪ್ಯಾಕೆಟ್‌ಗಳು, ಉಪ್ಪಿನಕಾಯಿ ಇತ್ಯಾದಿ ಇತ್ಯಾದಿ.

ಆ ದಿನ ನನ್ನ ಮಡದಿ ಮತ್ತು ಕುಟುಂಬದವರೆಲ್ಲರಿಂದ ಭರ್ಜರಿಯಾಗಿ ಬೀಳ್ಕೊಡಲ್ಪಟ್ಟು ಅಮೇರಿಕಕ್ಕೆ ನನ್ನ ಪ್ರಯಾಣವನ್ನು ಬೆಂಗಳೂರಿನಿಂದ ಪ್ರಾರಂಭಿಸಿದೆ. ಬೆಂಗಳೂರಿನಿಂದ ಲಂಡನ್, ಲಂಡನಿಂದ ನುವರ್ಕ್ - ನ್ಯೂ ಜೆರ್ಸಿ ಕಡೆಗೆ. ಲಂಡನ್‌ನಲ್ಲಿ ನನಗೆ ಮುಂದಿನ ವಿಮಾನ ಹತ್ತಲು ಇದ್ದದ್ದು ಕೇವಲ ಒಂದೂವರೆ ಗಂಟೆ.

ಮೊದಲ ಬಾರಿಗೆ ವಿದೇಶ ಪ್ರಯಾಣ ಮಾಡುತಿದ್ದ ನನಗೆ ಈ ಬೋರ್ಡಿಂಗ್ ಗೇಟ್ ಗಳ ಬಗ್ಗೆ ಅಷ್ಟಾಗಿ ತಿಳಿದಿರಲಿಲ್ಲ. A-51 ಗೇಟ್ ಬದಲು B-51 ಗೇಟ್ ಬಳಿ ಕುಳಿತು ಬಿಟ್ಟೆ. ಮುಂದಿನ ವಿಮಾನದ ಸಮಯವಾದರೂ ಅಲ್ಲಿ ಇದ್ದ ಟೀವಿಯಲ್ಲಿ ಏನೂ ಬರದಿದ್ದನ್ನು ನೋಡಿ, ಇಲ್ಲೂ ನಮ್ಮ ಬೆಂಗಳೂರಿನ ಬಸ್ ನಿಲ್ದಾಣ ತರಹ ನನ್ನ ವಿಮಾನ ಇನ್ನೂ ಬಂದಿಲ್ಲ ಅಂದು ಕೊಂಡೆ. ಆಗ ವಿಮಾನ ನಿಲ್ದಾಣದ ಆಕಾಶವಾಣಿಯಲ್ಲಿ ಯಲ್ಲಿ ಪದೇ ಪದೇ ಒಂದು ಘೋಷಣೆ ಕೇಳ ತೊಡಗಿತು. "Mr. FNU (ಫ್ನು) is required to report at gate A-51. Your flight is ready to take off". ಯಾರಪ್ಪಾ ಇದು, ಎಂಥಹ ಹೆಸರು, ಆವಾಗಿನಿಂದ ಬಡ್ಕೊಂತ ಇದಾರೆ, ಆ ಯಪ್ಪ ಹೋಗ್ತಾನೇ ಇಲ್ಲ ಅಂದುಕೊಂಡೆ. ಮೂರನೇ ಸಲ ಆದ ಘೋಷಣೆಯಲ್ಲಿ ವಿಮಾನದ ಸಂಖ್ಯೆ ಮತ್ತು ಅದರ ಪ್ರಯಾಣದ ಜಾಗವನ್ನು ಗಮನಿಸಿದೆ. "ಅರೆ ಇದು ನ್ಯೂ ಜೆರ್ಸಿಗೆ ಹೋಗ್ತಾ ಇದೆಯಲ್ಲ?" ಅಂತ ಅಲ್ಲೇ ಇದ್ದ ಪಕ್ಕದ ದೊಡ್ಡ ಟೀವಿಯಲ್ಲಿ ನೋಡಿದಾಗ ಗೇಟ್ ನಂಬರ್ A-51 ಅಂತ ಇದ್ದಿದನ್ನು ನೋಡಿ ನನ್ನ ಮಿದುಳು ಮತ್ತು ಹೃದಯ ಸ್ಥಳಗಳನ್ನು ಬದಲಿಸಿಕೊಂಡವು. ಅಲ್ಲೇ ಆಚೆಗೆ ಇದ್ದ ಗಡಿಯಾರದಲ್ಲಿ ಸಮಯ ನೋಡಿದರೆ ನನ್ನಗೆ ಇದ್ದದು ೮ ನಿಮಿಷಗಳು. ಅಲ್ಲೇ ಇದ್ದ ಸಹಾಯ ಮೇಜಿನಿಂದ A-51 ಗೇಟ್ ಗೆ ಹೇಗೆ ಹೋಗಬೇಕು ಎಂದು ಅರಿತು ಉಸೈನ್ ಬೋಲ್ಟ್ ಗಿಂತ ವೇಗವಾಗಿ ಓಡಿದೆ. ಗೇಟ್ ಬಳಿ ಬಂದರೆ, ಗೇಟ್ ಮುಚ್ಚಲು ಸರಿಯಾಗಿ ಒಂದು ನಿಮಿಷ ಇತ್ತು. ಅಲ್ಲಿದ್ದ ಅಧಿಕಾರಿಗಳಿಗೆ ನನ್ನ ಬೋರ್ಡಿಂಗ್ ಪಾಸ್ ಮತ್ತು ಪಾಸ್‌ಪೋರ್ಟ್ ಕೊಟ್ಟಾಗ ನನಗೆ ಗೊತ್ತಾಗಿದ್ದು ಆ "ಮಿಸ್ಟರ್. ಫ್ನು" ನಾನೇ ಅಂತ. ಆಮೇಲೆ ತಿಳಿಯಿತು ಅವರು "ನಾಗಭೂಷಣ" ಅಂತಾನೂ ಘೋಷಣೆ ಮಾಡಿದ್ದರು ಅಂತ. ಅವರ ಇಂಗ್ಲೀಷ್ ಉಚ್ಚಾರಣೆಯಲ್ಲಿ ನಾಗಭೂಷಣ ಹೇಗೆ ಬಂದಿತ್ತೋ ನನಗೆ ಗೊತ್ತಿಲ್ಲ..




ಉಫ್ ಅಂತ ವಿಮಾನದಲ್ಲಿ ಕುಳಿತು ನ್ಯೂ ಜೆರ್ಸಿ ಕಡೆಗೆ ಪ್ರಯಾಣ ಬೆಳಿಸಿದೆ. ನುವರ್ಕ್ ವಿಮಾನ ನಿಲ್ದಾಣಕ್ಕೆ ನನ್ನ ಅತ್ತೆಯ ಮಗ ನನ್ನನ್ನು ಕರೆದುಕೊಂಡು ಹೋಗಲು ಬರುವುದೆಂದು ಮೊದಲೇ ನಿಗದಿಯಾಗಿತ್ತು. ವಿಮಾನ ನಿಲ್ದಾಣ ಕ್ಕೆ ಬಂದ ಮೇಲೆ ಅವರಿಗೆ ದೂರವಾಣಿ ಮೂಲಕ ಕರೆ ಮಾಡಿ ತಿಳಿಸಬೇಕಾಗಿತ್ತು. ಇಮ್ಮಿಗ್ರೇಶನ್ ಮುಗಿಸಿ ಹೊರಬಂದ ನಾನು ದೂರವಾಣಿ ಮಾಡಲು ನಾಣ್ಯ ಹುಡುಕ ಹೊರಟೆ. ಆಗ ನೆನಪಾಯಿತು, ನಾನು ನಾಣ್ಯ ಇದ್ದ ಚೀಲವನ್ನು ಬಿಟ್ಟು ಬಂದಿದ್ದೆ ಅಂತ. ಆಗ ನನಗೆ ಹೊಳೆದಿದ್ದು "ಸ್ಟಾರ್ ಬಕ್ಸ್" ನಲ್ಲಿ ಕಾಫಿ ಕೊಂಡು ಕೊಂಡರೆ ಚಿಲ್ಲರೆ ನಾಣ್ಯ ಸಿಗುತ್ತದೆ ಎಂದು. ಸರಿ ಅಲ್ಲೇ ಇದ್ದ ಸ್ಟಾರ್ ಬಕ್ಸ್ ಗೆ ಹೋಗಿ ಕಾಫಿ ಆರ್ಡರ್ ಮಾಡಿದೆ, ಅವನು ಕಾಫಿ ಕಪ್ ನಲ್ಲಿ ಹೆಸರು ಬರೆಯಲು ನನ್ನ ಹೆಸರನ್ನು ಕೇಳಿದ, ನಾನು ಹೇಳಿದ ಹೆಸರು ಅವನಿಗೆ ಅರ್ಥವಾಗಲಿಲ್ಲ. ಅದಕ್ಕಾಗಿ ಅವನಿಗೆ ಪಾಸ್‌ಪೋರ್ಟ್ ಕೊಟ್ಟೆ. ಆ ಮನುಷ್ಯ ವೀಸಾ ಪುಟವನ್ನು ತೆಗೆದು ನನ್ನ ಹೆಸರನ್ನು "ಮಿಸ್ಟರ್ ಫ್ನು" ಎಂದು ಕಾಫೀ ಕಪ್ ಮೇಲೆ ಬರೆದ. ನಾನು ಅದನ್ನ ಗಮನಿಸಲೇ ಇಲ್ಲ. ಮತ್ತೆ ಅದೇ ಲಂಡನ್ ವಿಮಾನ ನಿಲ್ದಾಣದ ದೃಶ್ಯ ಪುನರಾವರ್ತನೆ ಆಯಿತು. ಕಾಫೀ ಸಿದ್ಧವಾದ ಕೂಡಲೇ ಅಲ್ಲಿದ್ದ ಸಿಬ್ಬಂದಿ "ಮಿಸ್ಟರ್. ಫ್ನು " ಎಂದು ಇಡೀ ವಿಮಾನ ನಿಲ್ದಾಣಕ್ಕೆ ಕೇಳುವಂತೆ ಕೂಗಿದ. ಆದರೆ ಈ ಬಾರಿ ಎಚ್ಚೆತ್ತುಕೊಂಡ ನಾನು ಕೂಡಲೇ ಎದ್ದು ಹೋಗಿ ಅವನ ಎದುರು ನಿಂತೆ. ಅವನು ನನ್ನನ್ನು ಮೇಲಿಂದ ಕೆಳಗೆ ನೋಡಿ , ನೀವು ಆಫ್ರಿಕಾದ ಯಾವ ದೇಶದಿಂದ ಬಂದಿದ್ದಿರಿ? ನಿಮ್ಮ ಹೆಸರಲ್ಲಿ 'F' ಸೈಲೆಂಟ? ಅಂತ ಕೇಳಿದ. ಮೊದಲು ನನಗೆ ಅವನ ಮಾತಿನಿಂದ ಸ್ವಲ್ಪ ಕಸಿವಿಸಿ ಆದರೂ, ಆಮೇಲೆ ಅನಿಸಿತು, ಕಾಫಿ ಕಪ್ ಮೇಲೆ ಬರೆದ ಹೆಸರು ನೋಡಿ ಅವನ ಈ ಪ್ರಶ್ನೆ ಅಂತ..

(ಮುಂದಿನ ಪುಟಕ್ಕೆ...)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

(.. ಹಿಂದಿನ ಪುಟದಿಂದ)

## *"ಮೊದಲ ಹೆಸರು ಗೊತ್ತಿಲ್ಲ, ಮೊದಲ ಹೆಸರು ಇಟ್ಟಿಲ್ಲಾ....."*

ಇದು ಇಲ್ಲಿಗೆ ಮುಗಿಯಲಿಲ್ಲ, ಕಳೆದ ೭ ವರ್ಷಗಳಿಂದ ಈ 'ಫ್ನು' ಒಂದು ರೀತಿ "ಫ್ಲೂ" ರೋಗದ ತರಹ ಕಾಡುತ್ತಲೇ ಇದೆ. ಡ್ರೈವಿಂಗ್ ಲೈಸೆನ್ಸ್ ಮಾಡಿಸಲು ಹೋದಾಗಲೆಲ್ಲ ಒಂದಲ್ಲಾ ಒಂದು ಕಿರಿಕಿರಿ. ನ್ಯೂ ಜರ್ಸಿಯಲ್ಲಿನ ಒಂದು DMV ಆಫೀಸ್ ನಲ್ಲಂತೂ ನಾನು ಸುಪ್ರಸಿದ್ಧ. ಅಲ್ಲಿನ ಸಿಬ್ಬಂದಿಯೊಬ್ಬಳು ನಾನು ಹೋದಾಗಲೆಲ್ಲಾ, 'See Mr.Fnu from India is here ಎಂದು ತಮಾಷೆ ಮಾಡಿದ್ದೂ ಇದೆ.

ಈ ಹೆಸರಿನ ಗೋಜಿನಿಂದ. SSN ಕಚೇರಿಯಲ್ಲೂ ಇದೇ ಗೋಳು. ಯಾರಿಗೂ ಏನು ಹೆಸರು ಮುದ್ರಿಸಬೇಕೆಂದು ಸರಿಯಾದ ಕ್ರಮ ಗೊತ್ತಿಲ್ಲ. ವಿಶೇಷ ಅಧಿಕಾರಿಯೊಂದಿಗೆ ಮಾತಾಡಿ ವಿಷಯ ಇತ್ಯರ್ಥ ಮಾಡಬೇಕಾಯಿತು.

ಮೊದಲಿನ ಕೆಲವು ವರ್ಷಗಳಲ್ಲಿ ನಾನು ಪಡೆಯಲು ಯತ್ನಿಸಿದ್ದ ಕ್ರೆಡಿಟ್ ಕಾರ್ಡ್ ಗಳೆಲ್ಲ ತಿರಸ್ಕೃತ ವಾಗುತಿದ್ದವು. ಇನ್ನು ಕ್ರೆಡಿಟ್ ಕಾರ್ಡ ಸಿಕ್ಕಿತೆಂದು ಸಂತಸ ಗೊಂಡು , ಕಾರ್ಡ್ ನೋಡಿದರೆ ಅಲ್ಲಿ ನನ್ನ ಹೆಸರನ್ನು 'FNU P NAGBHU-SHANA'' ಅಂತ ನಮೂದಿಸಿತ್ತು. ನನ್ನ ಹೆಸರೇ ಇಲ್ಲ.

ಕಳೆದ ವರ್ಷ ನನ್ನ ವೀಸಾ ನವೀಕರಣ ಗೊಂಡಾಗ ಮಗದೊಂದು ಅಚ್ಚರಿ ಕಾದಿತ್ತು. ಈ ಬಾರಿ FNU ಬದಲಾಗಿ 'NO NAME GIVEN, PRASAD NAGBHUSHANA' ಎಂದು ಮುದ್ರಿಸಲ್ಪಟ್ಟಿತ್ತು. ಕನ್ನಡದಲ್ಲಿ ಅನುವಾದಿಸದರೆ 'ಹೆಸರೇ ಇಟ್ಟಿಲ್ಲ'. ಇದು FNU ಗಿಂತ ವಿಚಿತ್ರವಾದ ಹೆಸರು. ಆದರೆ ನನ್ನ ಅದೃಷ್ಟ, ವೀಸಾದಲ್ಲಿ FNU ಅಂತಾನೆ ಮುದ್ರಿಸಲ್ಪಟ್ಟಿತ್ತು. ಅದೇನೋ ಗೊತಿಲ್ಲ ಈ ಬಾರಿ ಮಾತ್ರ FNU ಹೆಸರು ನೋಡಿ ಖುಶಿ ಪಟ್ಟಿದ್ದೆ. ಇನ್ನೊಂದು ಸಲ ಹೀಗೆ ವಿಮಾನದಲ್ಲಿ ಪ್ರಯಾಣ ಮಾಡುವಾಗ ಆ ಏರ್‌ಲೈನ್ ನವರೇ ನನಗೆ ಇನ್ನೊಂದು ನಾಮಕರಣ ಮಾಡಿಬಿಟ್ಟರು. 'ಮಿಸ್ಟರ್. ನೋನ್' . ಇದೇನು ಹೆಸರು ಅಂದು ಕೊಂಡಿರಾ?. ಇದು ಇಂಗ್ಲೀಷ್ ನಲ್ಲಿ 'MR. NONE (ನನ್) PRA-SAD NAGBUSHAHANA' .

ಇಷ್ಟೆಲ್ಲಾ ಫಜೀತಿಗೆ ಈಡು ಮಾಡಿದ ಈ ಹೆಸರಿನ ತಪ್ಪನ್ನು ಸರಿಮಾಡಲು ಯಾಕೆ ನಾನು ಪ್ರಯತ್ನಿಸಿಲ್ಲ ಅಂತ ನಿಮಗೆ ಅನಿಸುತ್ತಿರಬಹುದು. ಅದನ್ನೂ ನಾನು ಪ್ರಯತ್ನಿಸಿದ್ದೇನೆ. ಪಾಸ್‌ಪೋರ್ಟ್ ನಲ್ಲಿ ಹೆಸರನ್ನು ಸರಿ ಪಡಿಸಬೇಕೆಂದರೆ ಅದನ್ನು ಆ ವ್ಯಕ್ತಿಯ ಮರು ನಾಮಕರಣ ಎಂದು ಪರಿಗಣಿಸಲಾಗುತ್ತದೆ. ಅದು ಸ್ವಲ್ಪ ಕಷ್ಟವಾದ ಕೆಲಸ. ಪಾಸ್‌ಪೋರ್ಟ್‌ನಲ್ಲಿ ಸರಿ ಪಡಿಸಿದರೆ ಸಾಕಾಗದು, ವೀಸಾ, SSN, ಲೈಸೆನ್ಸ್ ಹೀಗೆ ಇನ್ನೂ ಹತ್ತು ಹಲವು ಕಡೆಯಲ್ಲಿ ಮತ್ತೆ ಸರಿ ಪಡಿಸಬೇಕಾಗುತ್ತದೆ. ದೊಡ್ಡ ತಲೆನೋವು. ಅದಕ್ಕೆ ದೊಡ್ಡವರು ಹೇಳಿರೋದು 'Prevention is better than cure' .

(.. ೮ ನೇ ಪುಟದಿಂದ)

## *ನಾ ನೋಡಿದ ಅಮೇರಿಕ !!*

ಇದೆಲ್ಲದರ ಜೊತೆ ನನ್ನ ತಮ್ಮ "ಕನ್ನಡಿಗ" ಎಂಬ ಟೀ ಶರ್ಟ್ ಹಾಕ್ಕೊಂಡಿರೋದು ನೋಡಿ, ಬಂದಿದ್ದ ಕನ್ನಡದವರೆಲ್ಲಾ, ಏನ್ ಸಾರ್ ಯಾವೂರು ಅಂತ ಕೇಳಿದಾಗ ಆದ ಸಂಭ್ರಮ ಅಷ್ಟಿಷ್ಟಲ್ಲ!! ನಮ್ಮಲ್ಲಿಯ ಜೋಗದ ಜಲಪಾತ ನಯಾಗರಾ ಫಾಲ್ಸ್ ಗಿಂತ ಕಡಿಮೆಯೇನೂ ಇಲ್ಲ. ವ್ಯತ್ಯಾಸಾವಿಷ್ಟೆ, ಸ್ವಚ್ಛತೆ, ಪ್ರಾಮುಖ್ಯತೆ ಮತ್ತು ಅನುಕೂಲತೆ. ಇಂತಹ ಅನುಭವಕ್ಕೆ ಎಡೆ ಮಾಡಿಕೊಟ್ಟ ಅಮೇರಿಕಾಕ್ಕೆ ನನ್ನದೊಂದು ನಮನ.

ಮುಂದಿನ ಮೂರ್ನಾಲ್ಕು ದಿನ ನ್ಯೂಯಾರ್ಕ್ ನೋಡುವ ದಿನಚರಿ ತಯಾರಾಗಿತ್ತು. 9/11 ಮೆಮೋರಿಯಲ್ ನೋಡಿದ ಅನುಭವ ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನವಿದು. ಇಲ್ಲಿಟ್ಟಿರುವ ಪ್ರತಿಯೊಂದು ವಸ್ತುವೂ ಒಂದೊಂದು ಕಣ್ಣೀರಿನ ಕಥೆಯನ್ನ ಸಾರಿ ಸಾರಿ ಹೇಳುತ್ತವೆ. ಪ್ರತಿ ಕಥೆ ಮುಗಿಯುತ್ತಿದ್ದಂತೆ, ಅಲ್ಲಿದ್ದ ಪ್ರತಿ ವ್ಯಕ್ತಿಯಿಂದ ಒಂದು ನಿಟ್ಟುಸಿರು ಬರುವುದು ಖಂಡಿತ. ಇಷ್ಟೆಲ್ಲ ಸಾವು-ನೋವುಗಳನ್ನು ಉದ್ದೇಶ ಪೂರ್ವಕವಾಗಿ ಮಾಡುವುದರಲ್ಲಿ, ಯಾರಿಗೆ ಲಾಭ? ಮಾನವನಾಗಿ ಹುಟ್ಟಿ ಮಾನವನನ್ನೇ ಕೊಲ್ಲುವ ಹೀನ ಕೃತ್ಯ ಯಾಕೆ ಬೇಕು? ಇದೆಲ್ಲಾ ಪ್ರಾರಂಭವಾದದ್ದು ಹೇಗೆ? ಏಕೆ? ಇದಕ್ಕೆ ಕೊನೆಯೆಂದು? ಇಂತಹ ನೂರಾರು ಪ್ರಶ್ನೆಗಳೊಂದಿಗೆ, ಈ ಘಟನೆ ಮಾನವ ಕುಲಕ್ಕೆ ಒಂದು ಕಳಂಕವೆಂಬ ಭಾವನೆಯೊಂದಿಗೆ ನಿಟ್ಟುಸಿರು ಬಿಡುವಂತಾಯ್ತು.

ಈ ನನ್ನ ಪ್ರವಾಸ, ಪೂರ್ವ ಮತ್ತು ಪಶ್ಚಿಮ ಅಮೇರಿಕಾ ಎಂಬ ಎರಡು ಭಾಗದಲ್ಲಿ ವಿಂಗಡಣೆಯಾಗಿತ್ತು. ಪೂರ್ವ ಅಮೇರಿಕಾವನ್ನು ನನ್ನ ತಮ್ಮ ಪ್ರಶಾಂತ್ ಮತ್ತವನ ಕುಟುಂಬ ಹಾಗೂ ನನ್ನ ಭಾವನ ಮಗಳಾದ ಪ್ರಿಯಾಂಕಾ ತೋರಿಸುವ ಜವಾಬ್ದಾರಿ ಹೊತ್ತಿದ್ದರು. ತಮ್ಮ ದಿನ ನಿತ್ಯದ ಕೆಲಸಗಳ ಮಧ್ಯದಲ್ಲೂ ಉತ್ಸಾಹದಿಂದ, ಸಂಯಮದಿಂದ ಸಹಕರಿಸಿದ ಮಂಜುಳಾಗೆ ನನ್ನದೊಂದು ಸಲಾಂ!! ವಯಸ್ಸಿಗೂ ಮೀರಿದ ವರ್ತನೆಯಿಂದ, ಕಳಕಳಿಯಿಂದ ನೋಡಿಕೊಂಡ ವಿಸ್ಮಿತಾ ಹಾಗೂ ಅನ್ವಿತಾಗೆ ನನ್ನ ಬಿಸಿಯಪ್ಪುಗೆಗಳು. ಪ್ರತಿಯೊಂದು ಕೆಲಸವನ್ನೂ ಅಚ್ಚುಕಟ್ಟಾಗಿ ಮಾಡುವುದರಲ್ಲಿ ಹೆಸರುವಾಸಿಯಾಗಿರುವ ನನ್ನ ತಮ್ಮ ಪ್ರಶಾಂತ್ ಈ ನನ್ನ ಕನಸಿನ ಪ್ರವಾಸವನ್ನೂ ಕೂಡ ಅಷ್ಟೇ ಅಚ್ಚುಕಟ್ಟಾಗಿ ಮುಗಿಸಿಕೊಟ್ಟ. ಅವನ ಈ ಕಾಳಜಿಗೆ ಯಾವ ರೀತಿಯಲ್ಲಿ ಕೃತಜ್ಞತೆ ಹೇಳಬೇಕೋ ಗೊತ್ತಿಲ್ಲಾ? ಬೀಳ್ಕೊಡುವಾಗ ನಾವಿಬ್ಬರೂ ಹೇಳಬೇಕೆಂದಿದ್ದ ಮಾತುಗಳನ್ನ ನಮ್ಮಿಬ್ಬರ ಕಣ್ಣಂಚಿನಲ್ಲಿದ್ದ ನೀರು ಹೇಳಿಯಾಗಿತ್ತು.

ಇದು ನಾನು ಬರೆಯುತ್ತಿರುವ ನನ್ನ ಅನುಭವದ ಮೊದಲ ಲೇಖನ. ನನ್ನಣ್ಣ ಕುಮಾರನ ಜೊತೆ ನೋಡಿದ ಪಶ್ಚಿಮ ಅಮೇರಿಕಾದ ನನ್ನ ಅನುಭವವನ್ನ ಮತ್ತೊಂದು ಅಂಕಣದಲ್ಲಿ ಬರೆಯುವ ಆಸೆ ನನ್ನದು.



ಸಂಚಿಕೆ
೧೬
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಮಹಿಳಾ ವಾಣಿ

### ""ಕೇಳಿದ ಹಾಡು ನೋಡದ ಸಿನಿಮಾ"



ಉಮಾ ಮೂರ್ತಿ

**ಹಿಂ**ದೊಮ್ಮೆ ಆಕಾಶವಾಣಿಯ ಕೋರಿಕೆ ಕಾರ್ಯಕ್ರಮದಲ್ಲಿ ಬರುತ್ತಿದ್ದ 'ನೀ ಇರಲು ಜೊತೆಯಲ್ಲಿ...ಬಾಳೆಲ್ಲ ಹಸಿರಾದಂತೆ' ಎಂಬ ಹಾಡನ್ನು ಮೆಚ್ಚಿ ಕೇಳಿದ್ದೇ ಕೇಳಿದ್ದು. ಆಹಾ ಹಾಡು ಇಷ್ಟು ಚೆನ್ನಾಗಿರಬೇಕಾದರೆ ಚಲನಚಿತ್ರ ಹೇಗಿರಬೇಡ ಎಂದು ಚಿತ್ರ ನೋಡಲು ಹೋದೆವು. ಕೊನೆಯಲ್ಲಿ ಇಂತಹ ಕತೆಯೇ ಇಲ್ಲದ ಚಿತ್ರಕ್ಕೆ ಎಂತಹ ಸುಂದರ ಹಾಡು ಎಂದು ನಿರಾಸೆ ಆಯಿತು. ಹೋಗಿ ಬಂದ ಮೇಲೆ ಸಂಬಂಧಿಕರೊಬ್ಬರು "ಆ ಡಬ್ಬ ಚಿತ್ರಕ್ಕೆ ಹೋಗಿದ್ಯಾ" ಅಂತ ಉಪ್ಪು ಖಾರ ಸವರಿದ್ದರು. ಅಂದಿನಿಂದ ಹಾಡು ಕೇಳಿ ಸಿನೆಮಾಗೆ ಹೋಗುವುದು ಸ್ವಲ್ಪ ಕಡಿಮೆಯಾಯಿತೇನೋ? ಆಕಾಶವಾಣಿಯ ಚಿತ್ರಗೀತೆಗಳ ಕೋರಿಕೆಯ ಕಾರ್ಯಕ್ರಮವಾಗಲಿ, ಊರಿನಲ್ಲಿಯ ೨೪ ಘಂಟೆಗಳ FM ರೇಡಿಯೋಗಳಾಗಲಿ ಇಲ್ಲದಿರುವುದು ಅಮೆರಿಕದಲ್ಲಿರುವ ನಮಗೆ ಹೊಸ ಹಾಡುಗಳ ಪರಿಚಯ ಸ್ವಲ್ಪ ನಿಧಾನವಾಗೇ ಆಗುತ್ತೆ ಎನ್ನಬಹುದು. ಇತ್ತೀಚಿನ ವರ್ಷಗಳಲ್ಲಿ ಕೇಳಿದ ಕೆಳಗಿನ ಕೆಲವೊಂದು ಹಾಡುಗಳು ಮನಸ್ಸಿನ ಭಾವನೆಗಳಿಗೆ ತಾಕಿ ಮತ್ತೆ ಕೇಳುವಂತೆ ಮಾಡಿದೆ. ಓದುವುದುರ ಜೊತೆಗೆ ಬಲಗಡೆ ಚಿತ್ರದ ಹೆಸರಿನ ಮೇಲೆ ಕ್ಲಿಕ್ ಮಾಡಿ, ಹಾಡನ್ನು ನೀವೂ ಕೂಡ ಕೇಳಿ ಆನಂದಿಸಿ, ನಿಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಿ.

**೧. ಬಾನಿಗೆ ಬಣ್ಣ ಸೋಕಲು, ಈ ಭೂಮಿಗೆ ರಂಗು ತುಂಬಿದೆ, ಈ ಬಂಧಕೆ ರಂಗೇರಿದೆ** **ಚಿತ್ರ:** 'ಅಷ್ಟ್ರಲ್ಲೇ JUST MiSSO'

ಸಣ್ಣ ಹಾಡಾದರೂ ಅದರಲ್ಲಿ 'ರಾಗವಿದು ಹುಡುಕುತಲಿ ಪ್ರೀತಿಯ ಗುಂಗಲ್ಲಿ' ಎನ್ನುವ ಸಾಲು ಕೆಲವುದಿನದ ಮಟ್ಟಿಗಾದರೂ ನಮ್ಮನ್ನು ಈ ಹಾಡಿನ ಗುಂಗಿನಲ್ಲೇ ಇರಿಸುತ್ತೆ. ಆದರೆ ಯಾಕೋ ಏನೋ ಚಿತ್ರ ನೋಡಬೇಕೆಂಬ ಕುತೂಹಲ ಇನ್ನೂ ಬಂದಿಲ್ಲ.

**೨. ಕಣ್ಣ ಹನಿ ಜಾರುವಲ್ಲಿ ಮಾತೆಲ್ಲವೂ ಮೌನವು ಮಣ್ಣಾಗುವ ಬಾಳಿನಲ್ಲಿ, ಏಕಾಂತದ ಯಾನವು ಮಾಯಾವಿ ನಿನ್ನೀ ಆಟ ಯಾತಕೋ ಬರಿ ಮಾಯೆ ಜೀವನ** **ಚಿತ್ರ:** ಊರ್ವಿ

ಪ್ರಸಿದ್ಧ ಗಾಯಕಿ K.S ಚಿತ್ರ ಅವರ ಕಂಠದಲ್ಲಿ ಮೂಡಿಬಂದಿರುವ ಈ ಹಾಡಿಗೆ ಗ್ರ್ಯಾಮಿ ಪ್ರಶಸ್ತಿ ವಿಜೇತರಾದ ಮನೋಜ್ ಜಾರ್ಜ್ ಅವರ ವಯೊಲಿನ್ ಹಾಗು ಸಂಗೀತ, ಕೇಳುಗರನ್ನು ಯಾವುದೋ ಲೋಕಕ್ಕೆ ಕೊಂಡೊಯ್ಯುತ್ತದೆ. ಸ್ವತಃ ಗಾಯಕಿ ಚಿತ್ರಾ, ಈ ಹಾಡಿಗೆ ಮನಸೋತಿದ್ದಾರೆ. ಕೇಳುತ್ತಾ, ಅಪರಿಚಿತ ಚಿತ್ರದ 'ಸವಿನೆನಪುಗಳು ಬೇಕು' ಹಾಡು ನೆನಪಾಗುತ್ತದೆ. ಉತ್ತಮ ಕಲಾವಿದರಾದ ಶೃತಿ ಹರಿಹರನ್, ಶ್ರದ್ಧಾ ಶ್ರೀನಾಥ್, ಶ್ವೇತ ಪಂಡಿತ್, ಅಚ್ಯುತ್ ರಾವ್ ಮುಂತಾದವರು ನಟಿಸಿರುವ ಈ ಚಿತ್ರ ಕುತೂಹಲ ಕೆರಳಿಸಿದರೂ ಹಾಡಿನ "ಬರೀ ಮಾಯೆ ಜೀವನ" ಅನ್ನುವ ಭಾರವಾದ ಸಾಲು ಚಿತ್ರ ನೋಡುವ ಧೈರ್ಯವನ್ನೇ ತೆಗೆಯಿತು.

**೩. ಉಸಿರಾಗುವೆ, ಅನುಸಾರಿಣಿ ನನ್ನ ಎದೆಗೆ, ಅಪರಾಜಿತೆ ನನ್ನ ಮನಕೆ ಅಧಿದೇವತೆ ಆದೆ ನೀ ನನ್ನ ಸ್ನೇಹಿತೆ** **ಚಿತ್ರ:** ಬಹು ಪರಾಕ್

ಭರತ್ ಬಿ, ಜೆ. ಅವರ ಸಂಗೀತ ನಿರ್ದೇಶನದ ಈ ಹಾಡನ್ನು ರಾಜೇಶ್ ಕೃಷ್ಣನ್ ಹಾಗು ಅನುರಾಧ ಭಟ್ ಅವರು ಸುಶ್ರಾವ್ಯವಾಗಿ ಹಾಡಿದ್ದಾರೆ. ಕೆಲವೊಮ್ಮೆ ಅಪ್ಪಟ ಕನ್ನಡ ಹಾಡುಗಾರರನ್ನು ಬಿಟ್ಟು ಕನ್ನಡ ಚಿತ್ರಗಳಿಗೆ ಬೇರೆ ಭಾಷೆಯ ಗಾಯಕರನ್ನು ಏಕೆ ಕರೆಸುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರ ಹುಡುಕುತ್ತಲೇ ಇದ್ದೇವೆ. ರಾಗ ಸಾಹಿತ್ಯ ವನ್ನು ಕೇಳಿ ಚಿತ್ರಕ್ಕಾಗಿ ಹುಡುಕಾಡಿದಾಗ ಮೊದಲು ನೋಡಿದ್ದು ವಿಮರ್ಶೆ. ಕತ್ತಿ, ಮಚ್ಚು, ಕಥೆ ಟ್ರೈಲರ್ ನೋಡಿ ಹಾಡೊಂದೇ ಸಾಕೆನಿಸಿತು.

**೪. ಮಾತಿಗೆ ಮಾತಿಲ್ಲ, ಮೌನವೇ ಮಾತೆಲ್ಲ ಇಂಗಿತವೇ ಇಂಗಿರಲು ವೇದನೆಯೇ ತಂಗಿರಲು** **ಚಿತ್ರ:** ಇಜ್ಜೋಡು

ಮೊದಲಿಗೆ ಕೇಳಿದಾಗ ಇದು ಭಾವ ಗೀತೆಯೋ ಅಥವಾ ಚಿತ್ರ ಗೀತೆಯೋ ಎಂದು ಅನುಮಾನ ಉಂಟಾಯಿತು. ಕಾರಣ ಹಾಡಿದ್ದು ಎಂ.ಡಿ.ಪಲ್ಲವಿ. ಅವರ ಭಾವಗೀತೆಯ ಸ್ವರ ಎಂತವರನ್ನೂ ಭಾವನಾಲೋಕಕ್ಕೆ ಕೊಂಡೊಯ್ಯುತ್ತದೆ. ಈ ಚಿತ್ರಕ್ಕೆ ಸಂಗೀತ ನೀಡಿದವರು ಮಣಿಕಾಂತ್ ಕದ್ರಿ. ಸುಧೀರ್ ಅತ್ತಾವರ್ ಅವರ ಉತ್ತಮ ಸಾಹಿತ್ಯ 'ಮನದಂಗಳ ಖಾಲಿ ಖಾಲಿ, ಇಲ್ಲ ರಂಗೋಲಿ ಎನ್ನುವ ಸಾಲುಗಳು ಕನ್ನಡ ಚಿತ್ರರಂಗದಲ್ಲಿಯ ಉತ್ತಮ ಸಾಹಿತ್ಯ ರಚನೆಯ ಕೊರತೆಯನ್ನು ಸ್ವಲ್ಪವಾದರೂ ನೀಗಿಸುತ್ತದೆ. ಈ ಹಾಡಿನ ಭಾವ, ಸಾಹಿತ್ಯ ಹಿಂದಿನ ಕೆಲವು ಭಾವಗೀತೆಗಳಾದ 'ತಪ್ಪಿ ಹೋಯಿತಲ್ಲೇ ಚುಕ್ಕಿ ಬೆಳಕಿನ ಜಾಡು", "ಯಾರ ದನಿಯದೋ ಯಾರ ಕರೆಯದೋ" ಮುಂತಾದ ಹಾಡುಗಳ ಸಾಲಿಗೆ ಸೇರುತ್ತದೆ. ತುಂಬಾ ಭಾರವಾದ ಕಥೆಯನ್ನು ಹೊಂದಿರುವ ಈ ಚಿತ್ರ ನೋಡಲು ಮನಸ್ಸು ಹಿಂಜರಿಯಿತೆನ್ನಬಹುದು.

**೫. ನಿನ್ನ ಸ್ನೇಹದಿಂದ ಎಲ್ಲಾ ಚಂದ ಚಂದ** **ಚಿತ್ರ:** ಮುಗುಳು ನಗೆ

ಎಲ್ಲಾ ಕನ್ನಡ ಸೀರಿಯಲ್ ಗಳ ಅಚ್ಚುಮೆಚ್ಚಿನ ಗೀತೆ. ಶ್ರೇಯ ಗೋಷಾಲ್ ಅವರ ಸಿಹಿದನಿಯಲ್ಲಿ ಮೂಡಿಬಂದಿದೆ. V ಹರಿಕೃಷ್ಣ ಸಂಗೀತ ನಿರ್ದೇಶನದ ಈ ಹಾಡು, ಅವರದೇ ಆದ ಕಡ್ಡಿಪುಡಿ ಚಿತ್ರದ "ಸೌಂದರ್ಯ ಸಮರ ಹಾಡು " ನೆನಪಿಸುತ್ತೆ. ಈ ಹಾಡು ಯೋಗರಾಜ್ ಭಟ್ ಹಾಗು ಗಣೇಶ್ ಜೋಡಿಯ 'ಅನಿಸುತಿದೆ ಯಾಕೋ ಇಂದು" ಜನಪ್ರಿಯ ಹಾಡಿನ ನಂತರ ಬಂದಿರುವ ಒಂದು ಸುಮಧುರ ಗೀತೆ. youtube ನಲ್ಲಿದೆ ಅಂತ ನೋಡಲು ಹೋದರೆ ಬೇರೆ ಯಾವುದೋ ಚಿತ್ರದ ಲಿಂಕ್ ಬರುತ್ತೆ! ಈ ಚಿತ್ರ ನೋಡಲು ಇನ್ನೂ ಸಾಧ್ಯವಾಗಿಲ್ಲ.

ಹೀಗೆ ಎಷ್ಟೋ ಸಮಯ ಹಾಡು ಕೇಳಿರುತ್ತೇವೆ. ಆದರೆ ಕಾರಣಾಂತರಗಳಿಂದ ಚಿತ್ರ ನೋಡಲು ಹೋಗುವುದಿಲ್ಲ, ನೋಡಲು ಬಯಸುವುದಿಲ್ಲ ಅಥವಾ ನೋಡಲು ಆಗುವುದೇ ಇಲ್ಲ. ಆದರೂ ಉತ್ತಮ ಕನ್ನಡ ಹಾಡುಗಳನ್ನು ಕೇಳುವ ಅವಕಾಶವಂತೂ ಈ ನೋಡದ ಸಿನೆಮಾಗಳು ಕೊಟ್ಟಿವೆ.



### ಕವನ

ಲಕ್ಷ್ಮಿ ಕೊಲಾಲ್





### ದೀ ಪಾ ವ ಳಿ

ದೀಪಗಳ ಹೊಸ ಬೆಳಕಿಗೆ
ಬೆದರಿಹುದು ಕಹಿ ಘಳಿಗೆ
ಹಣತೆಗಳ ಆ ನಾಟ್ಯದ ನೋಟಕೆ
ಕಣ್ಗಳರಸಿಹುದು ಸಿಹಿ ಗುಳಿಗೆ
ಬಣ್ಣದಾ ರಂಗೋಲಿಯು
ಇಮ್ಮಡಿಸಿದೆ ಸಂತೋಷವನು
ಈ ದೀಪಾವಳಿಗೆ ..
ಮಣ್ಣಿನಾ ದೀಪದ ಜ್ಯೋತಿಯು
ಪ್ರಜ್ವಲಿಸಿದೆ ಹೊಸ ಕಿರಣವನು
ನಮ್ಮೆಲ್ಲರ ಬಾಳಿಗೆ..




Copyright © KCO – Brindavana

ಸಂಚಿಕೆ
೧೯
ನವೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕಿಶೋರ ವಾಣಿ

*"ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಸುದೀಪ್ತ ಮತ್ತು ಸಿರಿ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಗಣೇಶೋತ್ಸವದ ವರದಿಯನ್ನು ತಮ್ಮ ಕೈಯಾರೆ ಬರೆದು ಕಳಿಸಿದ್ದಾರೆ. ಈ ಮಕ್ಕಳ ಬರವಣಿಗೆಗಳು ಮತ್ತು ಚಿತ್ರಗಳು ನಮ್ಮ ಬೃಂದಾವನ ವಾಣಿ ಸಂಚಿಗೆಗಳಲ್ಲಿ ಪ್ರಕಟಿತವಾಗುವುದು ಒಂದು ಸಂತಸಕರ ಹಾಗೂ ಶ್ಲಾಘನೀಯ ಸಂಗತಿ. ಇನ್ನೂ ಹೆಚ್ಚು ಮಕ್ಕಳು ಅವರ ಭಾವನೆಗಳನ್ನು ಬರಹ ರೂಪಕ್ಕೆ ತರಲಿ ಮತ್ತು ತಮ್ಮದೇ ಆದ ಶೈಲಿಯಲ್ಲಿ ಬರೆದ ಎಲ್ಲಾ ಪುಟಾಣಿಗಳಿಗೂ ಒಂದು ಚಪ್ಪಾಳೆ ಬರಲಿ ಎಂದು ಓದುಗರಲ್ಲಿ ಸವಿನಯ ಪ್ರಾರ್ಥನೆ." ...ಸಂಪಾದಕ ವರ್ಗ.*




ಸುದೀಪ್ತ ಮೂರ್ತಿ

ಸುದೀಪ್ತ ಮೂರ್ತಿ

:- ಗಣೇಶೋತ್ಸವ :-

ಗಣೇಶೋತ್ಸವ ಸೆಪ್ಟೆಂಬರ್ ___ ರಂದು ಹೈಟ್ಸ್‌ಟೌನ ಪ್ರೌಢಶಾಲೆಯಲ್ಲಿ ನಡೆಯಿತು. ೧೦ ಘಂಟೆಗೆ ಹಬ್ಬದ ಆಚರಣೆ ಶುರುವಾಯಿತು. ಬೃಂದಾವನ ಕನ್ನಡ ಶಾಲೆಯ ಮಕ್ಕಳು ಗಣೇಶನ ಪ್ರತಿಮೆಯನ್ನು ಮಾಡಿದರು. ಎಲ್ಲರು ಗಣೇಶ ದೇವರ ಪೂಜೆಯನ್ನು ಭಕ್ತಿಯಿಂದ ಮಾಡಿದರು.

ಆಮೇಲೆ ನಾವು ಊಟ ತಿಂದೆವು. ಅದಾದ ಮೇಲೆ ಕಾರ್ಯಕ್ರಮಗಳು ಶುರುವಾದವು. ಕಾರ್ಯಕ್ರಮದಲ್ಲಿ ನಾಟಕಗಳು, ನೃತ್ಯಗಳು, ಗಾಯನಗಳು ಇತ್ಯಾದಿ ಇದ್ದವು. ಒಂದು ಕೊಠಡಿಯಲ್ಲಿ ನಾಟಕ ಮತ್ತು ಸಾಹಿತ್ಯದ ಬಗ್ಗೆ ಚರ್ಚೆ ನಡೆಯಿತು. ಬೃಂದಾವನ ಶಾಲೆಯ ಮಕ್ಕಳು, ಕೃಷ್ಣ ಮತ್ತು ಜಾಂಬವಂತನ ಯುದ್ಧವಿರುವ "ಗಣೇಶ ವಿಜಯ" ನೃತ್ಯ ನಾಟಕ ಮಾಡಿದರು. ನಾನು ಡಾ|| ಸಂಜಯ್ ಜೊತೆ "ಶಿವ ತಾಂಡವ" ನೃತ್ಯದಲ್ಲಿ ಭಾಗವಹಿಸಿದೆನು.



ಅನ್ವಿತ ಪ್ರಶಾಂತ್





ಸಿರಿ ತೈಲಗೇರಿ


ಗಣೇಶೋತ್ಸವ- ಸಿರಿ ತೈಲಗೇರಿ.

ಗಣೇಶೋತ್ಸವ ಸೆಪ್ಟೆಂಬರ್ ೨೨ ರಂದು ಹೈಟ್ಸ್‌ಟೌನ್ ಪ್ರೌಢಶಾಲೆಯಲ್ಲಿ ನಡೆಯಿತು. ಗಣಪತಿ ಹಬ್ಬದ ಆಚರಣೆ ಬೆಳಗ್ಗೆ ೧೧ ಗಂಟೆಗೆ ಶುರುವಾಯಿತು. ಬೃಂದಾವನದ ಕನ್ನಡ ಶಾಲೆಯ ಮಕ್ಕಳು ಗಣೇಶ ಪ್ರತಿಮೆಯನ್ನು ಮಾಡಿದರು. ನಾವೆಲ್ಲರೂ ಗಣೇಶ ದೇವರ ಪೂಜೆಯನ್ನು ಭಕ್ತಿಯಿಂದ ಮಾಡಿದೆವು. ಆಮೇಲೆ ಹಬ್ಬದೂಟ ಮಾಡಿದೆವು. ಅದಾದಮೇಲೆ ಕಾರ್ಯಕ್ರಮಗಳು ಶುರುವಾದವು. ಕಾರ್ಯಕ್ರಮದಲ್ಲಿ ನಾಟಕಗಳು, ನೃತ್ಯಗಳು, ಗಾಯನಗಳು, ಇತ್ಯಾದಿ ಇದ್ದವು. ಒಂದು ಕೊಠಡಿಯಲ್ಲಿ ನಾಟಕ ಮತ್ತು ಸಾಹಿತ್ಯದ ಬಗ್ಗೆ ಚರ್ಚೆ ನಡೆಯಿತು. ಬೃಂದಾವನ ಕನ್ನಡ ಶಾಲೆಯ ಮಕ್ಕಳು ಕೃಷ್ಣ, ಜಾಂಬವಂತನ ಯುದ್ಧದ ಬಗ್ಗೆ ನಾಟಕ ಮಾಡಿದರು. ಈ ಕಥೆಯ ಹೆಸರು ಶಮಂತಕೋಪಾಖ್ಯಾನ. ಡಾ|| ಸಂಜಯ್ ಅವರ ಮಾರ್ಗದರ್ಶನದಲ್ಲಿ ಯುವ ಬೃಂದಾವನದ ಮಕ್ಕಳು ಶಿವತಾಂಡವ ನೃತ್ಯನಾಟಕ ಮಾಡಿದರು. ನಾಟಕವಾದ ಮೇಲೆ ಡಿಜೆ ಕಾರ್ಯಕ್ರಮವಿತ್ತು. ಅವರು ತುಂಬಾ ಚೆನ್ನಾಗಿ ಹಾಡಿ ಎಲ್ಲರನ್ನೂ ಕುಣಿಸಿದರು. ನಾವು ಮನೆಗೆ ಹೋಗುವುದಕ್ಕೆ ಮುಂಚೆ ಊಟದ ಡಬ್ಬ ತೆಗೆದುಕೊಂಡು ಮನೆಗೆ ಹೋದೆವು.


Copyright © KCO – Brindavana

# ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಕ್ಯಾಮೆರಾ ಕಣ್ಣಿನಿಂದ




ಎನ್. ಮೂರ್ತಿ






ಶ್ರೀವಿದ್ಯಾ ಪ್ರಶಾಂತ್



## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana